ಅಕ್ಟೋಬರ್-ಡಿಸೆಂಬರ್-2021

ಸಂಪುಟ : 3 ಸಂಚಿಕೆ : 4

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

October-December 2021

# KRUSHI VANA

*Quarterly news letter*















## ಸುಭಾಷಿತ

"ನೇಗಿಲ ಹಿಡಿದ, ಹೊಲದೊಳು ಹಾಡುತ,
ಉಳುವ ಯೋಗಿಯ ನೋಡಲ್ಲಿ,
ಫಲವನು ಬಯಸದ ಸೇವೆಯೇ ಪೂಜೆಯು,
ಕರ್ಮವೇ ಇಹಪರ ಸಾಧನವು
ಕಷ್ಟದೊಳನ್ನವ ದುಡಿವನೆ ತ್ಯಾಗಿ,
ಸೃಷ್ಟಿನಿಯಮದೊಳಗವನೇ ಭೋಗಿ...".

- ಕುವೆಂಪು

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

Volume: 3 Issue: 4
ಸಂಪುಟ: 3 ಸಂಚಿಕೆ: 4

## ಸಂಪಾದಕೀಯ ಮಂಡಳಿ

### ಗೌರವ ಸಂಪಾದಕರು

ಶ್ರೀ ಎನ್. ಸಂಪಂಗಿ, ಭಾ.ಅ.ಸೇ(ನಿ)

### ಸಂಪಾದಕರು

ಶ್ರೀ ದೀಪಕ್ ಶರ್ಮ, ಭಾ.ಅ.ಸೇ(ನಿ)

### ಸಹ ಸಂಪಾದಕರು

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

### ಸದಸ್ಯರು

ಶ್ರೀ ಎ.ಎಂ. ಅಣ್ಣಯ್ಯ, ಭಾ.ಅ.ಸೇ(ನಿ)

ಡಾ. ಎನ್. ಸ್ವಾಮಿ ರಾವ್

ಡಾ. ಎಮ್. ಮಹಾದೇವ ಮೂರ್ತಿ.

ಶ್ರೀಮತಿ ಶೋಭಾ ಎಚ್.ಜಿ.

## ಕಚೇರಿ ವಿಳಾಸ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)
ವನವಿಕಾಸ, ನೆಲಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003
ದೂ: 080 23566126

Email: iaftbangalore@gmail.com
www.iaft.co.in

## ಮನವಿ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಕೃಷಿ ಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಹಾಗೂ ನಿವೃತ್ತ ಅಧಿಕಾರಿಗಳು, ಪ್ರಗತಿಪರ ರೈತರು ಹಾಗೂ ಕೃಷಿ ವಿಶ್ವ ವಿದ್ಯಾನಿಲಯದ ಹಾಲಿ ಹಾಗೂ ನಿವೃತ್ತ ಉಪ ಕುಲಪತಿಗಳು, ಪ್ರಾಧ್ಯಾಪಕರು, ರೈತರು ಸದಸ್ಯರಾಗಿರುತ್ತಾರೆ. ಈ ಹಿರಿಯ ಹಾಗೂ ಅನುಭವಿ ತಜ್ಞರಿಂದ ಸರ್ಕಾರ, ಅರಣ್ಯ ಇಲಾಖೆ ಹಾಗೂ ರೈತರ ನಡುವೆ ಕೃಷಿ ಅರಣ್ಯ ಬೆಳೆಸುವಲ್ಲಿ ಸಲಹೆ ಸಹಕಾರ ನೀಡಲಾಗುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in)ದಲ್ಲಿರುವ ಅರ್ಜಿ ನಮೂನೆಯ ಪ್ರತಿಯನ್ನು ಪಡೆದು ಸದಸ್ಯತ್ವ ಶುಲ್ಕವನ್ನು IAFTಯ ಈ ಕೆಳಗಿನ ಅಕೌಂಟ್‌ಗೆ ಚೆಕ್/ಡಿಡಿ/NEFT ಮಾಡಲು ಕೋರಿದೆ. ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424

**ಎ.ಎಂ. ಅಣ್ಣಯ್ಯ,**
ಕಾರ್ಯದರ್ಶಿ

## ಪರಿವಿಡಿ


| | ಲೇಖನ | ಪುಟ |
|---|---|---|
| 1 | ಕೃಷಿ ಅರಣ್ಯದಲ್ಲಿ ಬಿದಿರು (ಸಂಪಾದಕೀಯ) | 04 |
| 2 | ಕೃಷಿ ಅರಣ್ಯಕ್ಕೆ ಕಾನೂನು ಕಾರ್ಯ ನೀತಿಯಲ್ಲಿರುವ ತೊಡಕುಗಳು ಹಾಗೂ ಪರಿಹಾರಗಳು | 05 |
| 3 | ಸರಳ ತಂತ್ರಜ್ಞಾನಗಳ ಜನಕ 'ಸವ್ಯಚಾಚಿ' | 09 |
| 4 | ಶ್ರೀಗಂಧ (Santalum album) | 11 |
| 5 | ಬಿದಿರು ಎಂಬ ಬೆರಗು... | 13 |


## ಜಾಹೀರಾತು ವಿವರಗಳು

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ಈ ಕೆಳಗಿನ ದರಗಳನ್ನು ನಿಗದಿ ಮಾಡಿದೆ. ಜಾಹೀರಾತು ನೀಡಲು ಕೋರಿದೆ.

| ಕ್ರ.ಸಂ | ವಿಸ್ತೀರ್ಣ | ಕಪ್ಪು–ಬಿಳುಪು ದರ (ರೂ.ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/– | 5000/– | 1 ವರ್ಷ |
| 2 | 1/2 ಪುಟ | 5000/– | 10000/– | 1 ವರ್ಷ |
| 3 | 1 ಪುಟ | 10000/– | 20000/– | 1 ವರ್ಷ |

Publisher: IAFT, Editor (ಸಂಪಾದಕರು): Dipak Sarmah, IFS (Retd), KRUSHI VANA, Quarterly News Letter, October-December-2021
Printed By: S.K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bangalore-560019
Volume: 3
Issue: 4

ಸಂಪಾದಕೀಯ....

# ಕೃಷಿ ಅರಣ್ಯದಲ್ಲಿ ಬಿದಿರು



ಈ ಹಿಂದಿನ 'ಕೃಷಿವನ'ದ ಸಂಚಿಕೆಯಲ್ಲಿ ಜಾಗತಿಕ ಉಷ್ಣತೆಯ ನಿಯಂತ್ರಣಕ್ಕೆ ರೈತರ ಕೊಡುಗೆ ಎನ್ನುವುದನ್ನು ಚರ್ಚಿಸಲಾಗಿತ್ತು. ಜಾಗತಿಕ ಉಷ್ಣತೆಯ ನಿಯಂತ್ರಣವನ್ನು ಅನೇಕ ಚಟುವಟಿಕೆಗಳ ಮುಖಾಂತರ ಅಂದರೆ ಮರಗಳನ್ನು ಬೆಳೆಸುವುದು, ಸಾವಯವ ಕೃಷಿ, ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಮುಂತಾದವುಗಳ ಮುಖಾಂತರ ವಾತಾವರಣದಲ್ಲಿ ಹೆಚ್ಚುತ್ತಿರುವ ಇಂಗಾಲದ ಡೈ ಆಕ್ಸೈಡ್ ಪ್ರಮಾಣವನ್ನು ಕಡಿಮೆಗೊಳಿಸಬಹುದಾಗಿದೆ. ಇದರಲ್ಲಿ ಮರಗಳನ್ನು ಬೆಳೆಸುವುದರ ಬಗ್ಗೆ ಹೇಳಬೇಕೆಂದರೆ, ಬಿದಿರು ಎಲ್ಲಾ ಸಸ್ಯಗಳಿಗಿಂತಲೂ ಹೆಚ್ಚು ಉಪಯುಕ್ತವಾಗಿದ್ದು, ಕಡಿಮೆ ಸಮಯದಲ್ಲಿ ಹೆಚ್ಚಿಗೆ ಜೀವರಾಶಿಯನ್ನು (Bio mass) ಉತ್ಪಾದನೆ ಮಾಡಬಲ್ಲದು. ಬಿದಿರು ಬಹು ಉಪಯೋಗಿ ಸಸ್ಯವಾಗಿದ್ದು, ಅನೇಕ ಕೆಲಸಗಳಲ್ಲಿ ಬಳಸಲಾಗುತ್ತಿದೆ. ಭಾರತದ ಈಶಾನ್ಯ ರಾಜ್ಯಗಳಲ್ಲಿ ಬಿದಿರಿಲ್ಲದೇ ಯಾವ ತೋಟಗಳೂ ಪೂರ್ಣವೆನ್ನಿಸಿಕೊಳ್ಳದು. ಎಲ್ಲಾ ತೋಟಗಳ ಒಂದು ಭಾಗದಲ್ಲಿ ಬಿದಿರನ್ನು ಪ್ರತ್ಯೇಕವಾಗಿ ಬೆಳೆಸಲಾಗುವುದು. ಪುನರ್ ಬಳಕೆಯ ಸಂಪನ್ಮೂಲಗಳಲ್ಲಿ ಬಿದಿರು ಒಂದಾಗಿದ್ದು ಬಿದಿರನ್ನು ಬಳಸುವುದರಿಂದ ಮರ ಕಡಿಯುವುದನ್ನು ಕಡಿಮೆಗೊಳಿಸಬಹುದು. ಬಿದಿರು ಬೆಳೆಯುವುದರಿಂದ ಗ್ರಾಮೀಣ ಭಾಗದಲ್ಲಿ ಬಹಳಷ್ಟು ಉದ್ಯೋಗ ಸೃಷ್ಟಿಯಾಗುವುದು. ಇವುಗಳು ಸುಲಭವಾಗಿ ದೊರೆಯುವುದರಿಂದ ಮತ್ತು ಅನೇಕ ವಿಧದಲ್ಲಿ ಬಳಕೆ ಮಾಡಿಕೊಳ್ಳಲಿರುವ ಗುಣಗಳಾದ ಕಡಿಮೆ ತೂಕ ಹೊಂದಿರುವುದು, ವಿವಿಧ ಬಳಕೆಗೆ ಉಪಯುಕ್ತವಾಗಿದ್ದು, ಗಟ್ಟಿತನದಿಂದ ಕೂಡಿದ್ದು, ಹೇಗೆ ಬೇಕಾದರು ಬಗ್ಗಿಸಬಹುದು ಮತ್ತು ನವೀಕರಿಸಬಹುದಾಗಿದ್ದು ಪರಿಸರ ಸ್ನೇಹಿಯಾಗಿದೆ.

ಬಿದಿರನ್ನು ಅನೇಕ ದಿನ ನಿತ್ಯದ ಉಪಯೋಗಕ್ಕೆ ಬಳಸುವ ಅನೇಕ ವಸ್ತುಗಳ ತಯಾರಿಕೆಯಲ್ಲಿ ತಲೆ ತಲಾಂತರಗಳಿಂದ ಬಳಸಲಾಗುತ್ತಿದೆ. ಅನೇಕ ಕೃಷಿ ಉಪಕರಣಗಳ ತಯಾರಿಕೆಯಲ್ಲಿ ಮತ್ತು ಅನೇಕ ಉಪಕರಣಗಳ ಹಿಡಿಗಳಾಗಿ ಯಾವ ರೀತಿಯಲ್ಲಿ ಬೇಕಾದರೂ ಬಳಸಲು ಯೋಗ್ಯವಾಗಿದೆ. ಬಿದಿರನ್ನು ಪರಿಣಾಮಕಾರಿಯಾದ ಬೇಲಿ ನಿರ್ಮಾಣದ ಕಾರ್ಯದಲ್ಲಿ ಬಳಸಲಾಗುತ್ತಿದೆ. ಬಿದಿರನ್ನು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಯಥೇಚ್ಛವಾಗಿ, ಅಂದರೆ ಸಾರಿಗೆ (ಹಟ್ಟಣೆ) ಕಟ್ಟಲು, ಪೀಠೋಪಕರಣಗಳ ತಯಾರಿಕೆಯಲ್ಲಿ, ಚಾಪೆಗಳನ್ನು ನಿರ್ಮಿಸಲು, ಕುಕ್ಕೆಗಳು ಮತ್ತು ಬುಟ್ಟಿ ಎಣೆಯಲು, ಕೊಡಲಿಯ ಹಿಡಿಯಾಗಿ ಮತ್ತು ಇತರೆ ಕಾರ್ಯಗಳಲ್ಲಿ ಬಳಸಲಾಗುವುದು. ಬಿದಿರಿಗೆ ಸದಾಕಾಲ ಗ್ರಾಮೀಣ ಭಾಗದಲ್ಲಿ ಗುಡಿಕೈಗಾರಿಕೆಗೆ ಮತ್ತು ಕರಕುಶಲ ವಸ್ತುಗಳ ತಯಾರಿಗೆ ಕಚ್ಚಾವಸ್ತುವಾಗಿ ಬೇಡಿಕೆಯಲ್ಲಿರುವುದು. ಇಲ್ಲಿ ಬಿದಿರನ್ನು ವಿವಿಧ ಮನೆ ಬಳಕೆಯ ವಸ್ತುಗಳ ತಯಾರಿಕೆಯಲ್ಲಿ ಮತ್ತು ಅಲಂಕಾರಿಕಾ ವಸ್ತುಗಳನ್ನು ತಯಾರಿಸಲು ನುರಿತ ಕುಶಲಕರ್ಮಿಗಳು ಬಳಸುವರು. ಬಿದಿರನ್ನು ಪರಂಪರಾಗತವಾಗಿ ಬಳಸುವುದಷ್ಟೇ ಅಲ್ಲದೆ ಬಿದಿರನ್ನೂ ಅನೇಕ ನೂತನ ಮತ್ತು ಹೊಸತನದ ಕೆಲಸಗಳಲ್ಲಿ ಅಂದರೆ ಕಡಿಮೆಯಾಗುತ್ತಿರುವ ಮರದ ಸಂಪತ್ತಿಗೆ ಪರ್ಯಾಯವಾಗಿ ಮತ್ತು ದುಬಾರಿ ವೆಚ್ಚದ ಕಟ್ಟಡ ಸಾಮಾಗ್ರಿಗಳ ಬದಲಿಗೆ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಬಳಸಲಾಗುತ್ತಿದೆ. ಕೆಲವು ಜಾತಿಯ ಬಿದಿರಿನ ಬೀಜಗಳನ್ನು ಆಹಾರಕ್ಕಾಗಿ ಅಕ್ಕಿಯ ರೂಪದಲ್ಲಿ ಮತ್ತು ಬಿದಿರಿನ ಚಿಗುರನ್ನು (ಬಲಿಯದ ಭಾಗ) ತರಕಾರಿಯಾಗಿ ಬಳಸಲಾಗುವುದು. ಎಳೆ ಬಿದಿರಿನಿಂದ ಉಪ್ಪಿನಕಾಯಿ ಸಹ ತಯಾರಿಸಲಾಗುವುದು. ಬಿದಿರಿನ ಎಲೆಗಳು ಜಾನುವಾರುಗಳಿಗೆ ಉಪಯುಕ್ತವಾದ ಮೇವಾಗಿರುವುದು. ಮೇದರಿಬಾಂಬು (Dendrocalamus strictus), ಮತ್ತು ಡೌಗಾ ಬಿದಿರನ್ನು (Bambusa bamboos)ನ್ನು ಕಾಗದ ಕಾರ್ಖಾನೆಯಲ್ಲಿ ಅತ್ಯುತ್ತಮವಾದ ಕಾಗದ ತಯಾರಿಸಲು ಬಿದಿರಿನ ಎಳೆಗಳನ್ನು ಪಲ್ಪ್ ರೂಪದಲ್ಲಿ ಬಳಸಲಾಗುತ್ತಿದೆ.

ಬಿದಿರು ಕೃಷಿವನದಲ್ಲಿ ಬೆಳೆಯಲು ಯೋಗ್ಯವಾದ ಮತ್ತು ಉಪಯುಕ್ತವಾದ ಬೆಳೆಯಾಗಿರುವುದರಿಂದ, ಕರ್ನಾಟಕದಲ್ಲಿ ವಿಫುಲ ಅವಕಾಶವಿದೆ. ಕರ್ನಾಟಕದಲ್ಲಿ 7 ರಿಂದ 8 ಜಾತಿಯ ಸ್ಥಳೀಯ ಜಾತಿಯ ಬಿದಿರು–ಗಳುಗಳಾಗಿವೆ. ಅವುಗಳೆಂದರೆ ಮೇದರಿ (Dendrocalamus strictus), ಡೌಗಾ (Bambusa bamboos) (ಬಿದಿರುಗಳು), ಸೀಮೆಗಳ (Pseudoxytenanthera Stocksii) ಜಾತಿಯ ಬಿದಿರುಗಳು ಕೃಷಿ ವನದಲ್ಲಿ ಬೆಳೆಸಲು ಉಪಯುಕ್ತವೆನಿಸುತ್ತದೆ. ಮೇದರಿ ಬಿದಿರು ಎಲ್ಲಾ ಬಿದಿರುಗಳಿಗಿಂತಲೂ ಗಟ್ಟಿ ಜಾತಿಯದಾಗಿದ್ದು, ಬಯಲು ಸೀಮೆಯಲ್ಲಿ ಮತ್ತು ಒಣಭೂಮಿಯಲ್ಲಿ, ಒಳನಾಡು ಕರ್ನಾಟಕದ ಭಾಗದಲ್ಲಿ ಮತ್ತು ಅರೆ ಮಲೆನಾಡು ಭಾಗಗಳಲ್ಲಿ ಬೆಳೆಯಲು ಯೋಗ್ಯವಾಗಿವೆ. ಸೀಮೆಗಳು (Pseudoxytenanthera Stocksii) ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಬೆಳೆಸಲು ಸೂಕ್ತವಾಗಿದೆ. ಈ ಎರಡೂ ಜಾತಿಯ ಬಿದಿರಿನ ಕಡ್ಡಿಗಳು ಸಣ್ಣದರಿಂದ ಮಧ್ಯಮ ಗಾತ್ರವಾಗಿದ್ದು (3 ರಿಂದ 6 ಸೆಂ.ಮೀ) ಮತ್ತು ದಪ್ಪನೆಯ ಗೋಡೆಯನ್ನು ಹೊಂದಿರುವುದು ಹಾಗೂ ಕೆಲವು ಸಂದರ್ಭಗಳಲ್ಲಿ ಪೂರ್ಣ ಗಟ್ಟಿಯಾದ ಬಿದಿರಾಗಿರುವುದು. ಬಿದಿರಿನ ಗುಚ್ಚಗಳು (ಕ್ಲಂಪ್ಸ್) ಮಧ್ಯಮ ಗಾತ್ರದಲ್ಲಿದ್ದು ಜಮೀನಿನ ಬದುಗಳ ಮೇಲೆ, ಗಡಿಯಂಚಿನಲ್ಲಿ ಹಾಗೂ ತೋಟಗಳ ಸುತ್ತಲೂ ಬೆಳೆಯಬಹುದು. ಕೃಷಿಗೆ ಯೋಗ್ಯವಲ್ಲದ ಸಾಕಷ್ಟು ಜಮೀನಿದ್ದ ಕಡೆಗಳಲ್ಲಿ ಬಿದಿರನ್ನು ಪೂರ್ಣ ಪ್ರಮಾಣದ ಬೆಳೆಯಾಗಿ ಬ್ಲಾಕ್‌ಗಳಲ್ಲಿ ಸಹ ಬೆಳೆಯಬಹುದು. ಡೌಗಾ ಬಿದಿರಿನಿಂದ ಗುಚ್ಚಗಳು (ಕ್ಲಂಪ್ಸ್) (Bambusa bambos) ದೊಡ್ಡದಾಗಿರುವುದರಿಂದ, ಹೆಚ್ಚು ತೇವಾಂಶವಿರುವ ಕಡೆ ಅಂದರೆ ಹಳ್ಳಕೊಳ್ಳಗಳ ಪಕ್ಕದಲ್ಲಿ ಬೆಳೆಸಲು ಯೋಗ್ಯವಾಗಿದೆ. ಇದರಲ್ಲಿ ಮುಳ್ಳುಗಳಿರುವುದರಿಂದ, ಬಿದಿರಿನ ಕಡ್ಡಿಗಳು ದಪ್ಪದಾಗಿದ್ದು (5 ರಿಂದ 10 ಸೆಂ.ಮೀ) ಮತ್ತು ಒಳಭಾಗ ಟೊಳ್ಳಾಗಿರುವುದು. ಇವುಗಳನ್ನು ಜಮೀನಿನ ಬಸಿಗಾಲುವೆಗಳ ಪಕ್ಕದಲ್ಲಿ ಬೆಳೆಸಲು ಶಿಫಾರಸ್ಸು ಮಾಡಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಈಶಾನ್ಯ ಭಾಗದಿಂದ ತಂದ ಕೆಲವು ಬಿದಿರನ್ನು ಪರಿಚಯಿಸಲಾಗಿದೆ. ಈ ಜಾತಿಯ ಬಿದಿರಿಗೆ ಹೆಚ್ಚಿನ ಕಾಳಜಿ ವಹಿಸುವ ಅಗತ್ಯವಿದೆ. ಏಕೆಂದರೆ ಇವುಗಳಿಗೆ ಹೆಚ್ಚಿನ ನೀರಿನ ಅಗತ್ಯವಿದೆ ಹಾಗೂ ಆಳ ಮಣ್ಣಿರುವ ಮತ್ತು ಫಲವತ್ತಾದ ಭೂಮಿಯ ಅವಶ್ಯಕತೆಯಿದೆ. ಕರ್ನಾಟಕದಲ್ಲಿ ಕೃಷಿವನದ ದೀರ್ಘಕಾಲದ ಯಶಸ್ಸಿಗೆ, ಮೂರು ಸ್ಥಳೀಯ ಜಾತಿಯ ಬಿದಿರುಗಳನ್ನು ಬೆಳೆಯಲು ಶಿಫಾರಸ್ಸು ಮಾಡಿದೆ. ಏಕೆಂದರೆ ಇವುಗಳು ಸ್ಥಳೀಯ ಹವಾಗುಣಕ್ಕೆ ಮತ್ತು ಮಣ್ಣಿಗೆ ಹೊಂದಿಕೊಳ್ಳುತ್ತವೆ.

– ಶ್ರೀ ದೀಪಕ್ ಶರ್ಮ
**ಸಂಪಾದಕರು**

## ಕೃಷಿಅರಣ್ಯ ಸಂಸ್ಥೆಯ ಸದಸ್ಯತ್ವ

| ಸದಸ್ಯತ್ವದ ವಿವರ | ಶುಲ್ಕ (ರೂ.) |
|---|---|
| ಸಂಸ್ಥೆ ಸದಸ್ಯತ್ವ | 25,000.00 |
| ಪೋಷಕ ಸದಸ್ಯತ್ವ | 20,000.00 |
| ಅಜೀವ ಸದಸ್ಯತ್ವ | 5,000.00 |
| ಸಹ ಸದಸ್ಯತ್ವ | 2,000.00 |
| ಸಾಮಾನ್ಯ ಸದಸ್ಯತ್ವ (ಕೃಷಿಕರಿಗೆ) | 100.00 |

# ಕೃಷಿ ಅರಣ್ಯಕ್ಕೆ ಕಾನೂನು ಕಾರ್ಯ ನೀತಿಯಲ್ಲಿರುವ ತೊಡಕುಗಳು ಹಾಗೂ ಪರಿಹಾರಗಳು

✍ **ಎ.ಎಂ. ಅಣ್ಣಯ್ಯ,** ಭಾ.ಅ.ಸೇ(ನಿವೃತ್ತ), ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು E-mail: am.annaiah@gmail.com ದೂ: 94480 19306

ಹಸಿರು ಪರಿಸರದ ರೂಪದಲ್ಲಿರುವ ಅರಣ್ಯಗಳು, ಮರಗಿಡಗಳು, ತೋಟಗಾರಿಕೆ ಹಾಗೂ ಕೃಷಿ ಬೆಳೆಗಳು ಇರುವುದೊಂದೇ ಭೂಮಿಯಲ್ಲಿರುವ ಸಕಲ ಜೀವಿಗಳಿಗೆ ಆಹಾರ, ಆಶ್ರಯ ಹಾಗೂ ವಾತಾವರಣ ನೀಡಿ ಜೀವ ಚಕ್ರವನ್ನು ಮುಂದುವರಿಸಿವೆ. ಪರಿಸರದ ಅಂಗಗಳಾದ ಗಾಳಿ, ನೀರು, ಮಣ್ಣು ಸಸ್ಯ ಹಾಗೂ ಪ್ರಾಣಿ ವರ್ಗಗಳಲ್ಲಿ ಹಸಿರಾಗಿರುವ ಸಸ್ಯವರ್ಗ, ಪರಿಸರ ಸಮತೋಲನೆಯಲ್ಲಿ ಮಹತ್ತರ ಪಾತ್ರವಹಿಸುತ್ತದೆ.

**ಸಂವಿಧಾನ ಮತ್ತು ಅರಣ್ಯ ನೀತಿ:**

ಭಾರತದ ಸಂವಿಧಾನ ಕಲಂ 48 (ಎ) ಪ್ರಕಾರ ರಾಜ್ಯ ನೀತಿ ನಿರ್ದೇಶಕ ತತ್ವಗಳಡಿಯಲ್ಲಿ ಪರಿಸರ ರಕ್ಷಣೆ ಹಾಗೂ ಸುಧಾರಣೆ ಮಾಡಲು ಮತ್ತು ದೇಶದ ಅರಣ್ಯಗಳು ಹಾಗೂ ವನ್ಯಜೀವಿಗಳನ್ನು ರಕ್ಷಣೆ ಮಾಡಲು ಸರ್ಕಾರಗಳಿಗೆ ನಿರ್ದೇಶನ ನೀಡಲಾಗಿದೆ. ಸಂವಿಧಾನ ಕಲದ 51(ಎ) ಪ್ರಕಾರ ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಜೀವಿಗಳ ಸಮೇತ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಮತ್ತು ಸುಧಾರಿಸುವುದು ಹಾಗೂ ಜೀವಿಗಳಿಗೆ ಅನುಕಂಪ ತೋರಿಸುವುದು ಪ್ರತಿಯೊಬ್ಬ ಭಾರತೀಯ ನಾಗರೀಕನ ಮೂಲಭೂತ ಕರ್ತವ್ಯವಾಗಿದೆ.

ಭಾರತದ 1988ರ ಅರಣ್ಯ ಕಾರ್ಯನೀತಿಯ ಮುಖ್ಯ ಉದ್ದೇಶಗಳೆಂದರೆ, ಜೀವ ವೈವಿಧ್ಯ ಸಂರಕ್ಷಣೆ, ಪರಿಸರ ಸಮತೋಲನ ರಕ್ಷಣೆ, ಮಣ್ಣಿನ ಸವಕಳಿಯನ್ನು ತಡೆಗಟ್ಟುವುದು, ವಿಸ್ತಾರವಾದ ಅರಣ್ಯೀಕರಣ, ಇತ್ಯಾದಿ. ಈ ಅರಣ್ಯ ನೀತಿಯಲ್ಲಿ ಗ್ರಾಮಸ್ಥರಿಗೆ ಹಾಗೂ ಬುಡಕಟ್ಟು ಜನರಿಗೆ ಉರುವಲು, ಮೇವು ಮತ್ತು ಇತರ ಅರಣೋತ್ಪನ್ನಗಳನ್ನು ಒದಗಿಸುವುದು; ಮರಮುಟ್ಟಿಗೆ ಪರ್ಯಾಯ ಸಂಪನ್ಮೂಲಗಳ ಬಳಕೆಯನ್ನು ಹೆಚ್ಚಿಸುವುದು; ಬೃಹತ್ ಜನತಾ ಚಳವಳಿಗಳನ್ನು ಸೃಷ್ಟಿಸಿ ಮಹಿಳೆಯರ ಪಾತ್ರವನ್ನು ಹೆಚ್ಚಿಸುವುದು; ಈಗಿರುವ ಅರಣ್ಯಗಳ ಮೇಲಿರುವ ಒತ್ತಡವನ್ನು ಕಡಿಮೆ ಮಾಡುವುದು ಮತ್ತು ಸ್ವಸ್ಥಾನೀಯ ಜೀವ ವೈವಿಧ್ಯವನ್ನು ಸಂರಕ್ಷಿಸುವುದು, ಇವುಗಳ ಬಗ್ಗೆ ಸ್ಪಷ್ಟ ನಿರ್ದೇಶನಗಳನ್ನು ಹಾಗೂ ಮಾರ್ಗದರ್ಶನಗಳನ್ನು ನೀಡಲಾಗಿದೆ. ಅರಣ್ಯ ನೀತಿಯ ಪ್ರಕಾರ ರಾಷ್ಟ್ರದ ಭೌಗೋಳಿಕ ಪ್ರದೇಶಗಳಲ್ಲಿ ಕನಿಷ್ಠ ಮೂರನೇ ಒಂದು ಭಾಗದ (33%) ಭೂ ಪ್ರದೇಶವು ಅರಣ್ಯ ಅಥವಾ ವೃಕ್ಷಗಳ ಹೊದಿಕೆಯಿಂದ ಕೂಡಿರಬೇಕಾದುದು ಗುರಿಯಾಗಿದೆ. ಈ ಗುರಿಯು ಬೆಟ್ಟ-ಗುಡ್ಡ ಪರ್ವತ ಪ್ರದೇಶಗಳಲ್ಲಿ ಮಣ್ಣಿನ ಸವಕಳಿ ಮತ್ತು ಭೂ ಅವನತಿ ತಡೆಯಲು ಹಾಗೂ ಪರಿಸರ ವ್ಯವಸ್ಥೆಯ ಸಂರಕ್ಷಣೆಗಾಗಿ ಮೂರನೇ ಎರಡು ಭಾಗದಲ್ಲಿ (66%) ಅರಣ್ಯ ಹೊದಿಕೆಯಿಂದ ಕೂಡಿರಬೇಕು.

**ಅರಣ್ಯ ಸಂರಕ್ಷಣಾ ಕಾಯ್ದೆ (1980)**

ಭಾರತದ ಅರಣ್ಯ ಸಂರಕ್ಷಣಾ ಕಾಯ್ದೆ (1980)ಯ ಪ್ರಪಂಚದಲ್ಲಿ ಅತಿ ಉನ್ನತ ಏಳಿಗೆಯಾಗುತ್ತಿರುವ ಅರಣ್ಯ ಸಂರಕ್ಷಣಾ ಕಾನೂನಿನಲ್ಲಿ ಒಂದಾಗಿದ್ದು ಅರಣ್ಯಗಳನ್ನು ಅರಣ್ಯೇತರ ಉದ್ದೇಶಕ್ಕೆ ಬಿಡುಗಡೆ ಮಾಡಲು ಕಠಿಣ ನಿಬಂಧನೆಗಳನ್ನು ಹಾಕಿದೆ. ಈ ಕಾನೂನನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವೇ 1996 ರಿಂದ ನೇರವಾಗಿ ಮಾನಿಟರ್ ಮಾಡುತ್ತಿದೆ. ಆದರೂ ಜನಸಂಖ್ಯಾ ಸ್ಫೋಟ, ಔದ್ಯೋಗೀಕರಣ ಹಾಗೂ ಮಾನವ ಅಭಿವೃದ್ಧಿ ಯೋಜನೆಗಳಿಂದಾಗಿ ಇರುವ ಸಾಂಪ್ರಾದಾಯಿಕ ಅರಣ್ಯ ಪ್ರದೇಶಗಳನ್ನು ಬಿಟ್ಟು ಕೊಡುವುದು ಅನಿವಾರ್ಯವಾಗಿದೆ. ಪರಿಸರ ಸಮತೋಲನ ಕಾಪಾಡಲು ಶೇಕಡವಾರು ಅರಣ್ಯ ಪ್ರದೇಶವನ್ನು 22 ರಿಂದ 33ಕ್ಕೆ ಏರಿಸಲು ಇರುವ ಮಾರ್ಗವೆಂದರೆ ಕೃಷಿ ಹಾಗೂ ತೋಟಗಾರಿಕೆ ಭೂಮಿಗಳಲ್ಲಿ ಹೆಚ್ಚು ಹೆಚ್ಚು ಮರ ಗಿಡಗಳನ್ನು ಬೆಳೆಯಬೇಕಿದೆ. ಅಂದರೆ ಕೃಷಿ ಅರಣ್ಯಕ್ಕೆ ಸಮಗ್ರ ಕಾನೂನು ಕಾರ್ಯ ನೀತಿಗಳು ಅವಶ್ಯಕವಿದೆ.

**ಕರ್ನಾಟಕದಲ್ಲಿ ಮರಗಳ ಸಂರಕ್ಷಣೆ:**

ನಗರಗಳು, ಕೈಗಾರಿಕೆಗಳು, ತೀವ್ರಗತಿಯಲ್ಲಿ ಬೆಳೆದಂತೆ ಮತ್ತು ಜನಸಂಖ್ಯೆಯು ಹೆಚ್ಚಾದಂತೆ, ಕರ್ನಾಟಕ ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವಿವೇಚನೆಯಿಲ್ಲದೆ ಬಹುಸಂಖ್ಯೆಯಲ್ಲಿ ಮರಗಳನ್ನು ಕಡಿಯುತ್ತಿರುವ ಪರಿಣಾಮವಾಗಿ ಅನಿರ್ದಿಷ್ಟವಾಗಿ ಮಳೆ ಬೀಳುವುದು, ಆಗಾಗ ಕ್ಷಾಮ, ನೆರೆಹಾವಳಿ, ಭೂಸವೆತ ಮತ್ತು ತತ್ಪರಿಣಾಮವಾಗಿ ಜೀವಿಗಳು ಮತ್ತು ಪರಿಸರದ ನಡುವಣ ಸಂಬಂಧದಲ್ಲಿ ಏರುಪೇರಾಗುತ್ತಿರುವುದರಿಂದ, ಮರಗಳನ್ನು ಕಡಿಯುವುದನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಜೀವಗಳು ಹಾಗೂ ಪರಿಸರದ ನಡುವಣ ಸಂಬಂಧದಲ್ಲಿ ಸಮತೋಲನವನ್ನು ಸ್ಥಾಪಿಸುವುದಕ್ಕಾಗಿ ಸಾಕಷ್ಟು ಸಂಖ್ಯೆಯಲ್ಲಿ ಸಸಿಗಳನ್ನು ನೆಡುವ ಬಗ್ಗೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ರಾಜ್ಯದಲ್ಲಿರುವ ಮರಗಳ ಸಂರಕ್ಷಣೆಗಾಗಿ **ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ 1976**ರಿಂದ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬಂದಿದೆ.

ಈ ಮೇಲಿನ ಕಾಯ್ದೆಯ ಪ್ರಕಾರ **"ಮರಗಳ ಸಂರಕ್ಷಣೆ"** ಎಂದರೆ, ಮರಗಳು ಸಹಜವಾಗಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಲು ಮತ್ತು ಅವುಗಳಿಗೆ ಹಾನಿಯಾಗುವುದನ್ನು ಅಥವಾ ಅವುಗಳನ್ನು ಕಡಿದು ಹಾಕುವುದನ್ನು ಅಥವಾ ಕೆಡಹುವುದನ್ನು ತಪ್ಪಿಸಿ ಅವುಗಳನ್ನು ಪೋಷಿಸುವುದು ಮತ್ತು ಸಂರಕ್ಷಿಸುವುದು ಮತ್ತು ಹೊಸ ಸಸಿಗಳನ್ನು ನೆಡುವುದು ಮತ್ತು ಮರಗಳನ್ನು ಸ್ಥಳಾಂತರಿಸುವುದು ಇವುಗಳನ್ನು ಒಳಗೊಳ್ಳುತ್ತದೆ.

**"ಮರಗಳನ್ನು ಕೆಡಹುವುದು"** ಎಂದರೆ ಬೇರುಗಳಿಂದ ಕಾಂಡವನ್ನು ಬೇರ್ಪಡಿಸುವುದು, ಮರವನ್ನು ಬೇರು ಸಹಿತ ಕಿತ್ತು ಹಾಕುವುದು ಮತ್ತು ಇದು ಮರಗಳಿಗೆ ಸಾಕಷ್ಟು ಹಾನಿಯನ್ನು ಉಂಟು ಮಾಡುವುದಾಗಿ ಅಥವಾ ಅವುಗಳನ್ನು ನಾಶಪಡಿಸುವುದಕ್ಕಾಗಿ ಅವುಗಳಿಗೆ ಬೆಂಕಿ ಹಚ್ಚುವುದು ಅಥವಾ ಅವುಗಳನ್ನು ಕಡಿಯುವುದು ಅಥವಾ ಅವುಗಳಿಗೆ ಸುತ್ತು ಪಟ್ಟಿ ಕೆತ್ತುವುದು ಅಥವಾ ಅವುಗಳ ಮೇಲೆ ವೃಕ್ಷ ನಾಶ ಪದಾರ್ಥಗಳನ್ನು ಪ್ರಯೋಗಿಸುವುದು ಇವುಗಳನ್ನು ಒಳಗೊಳ್ಳುತ್ತದೆ.

**"ಮರ"** ಎಂದರೆ, ಕಾಂಡದಿಂದ ಅಥವಾ ಮುಖ್ಯ ಭಾಗದಿಂದ ತನ್ನ ಟೊಂಗೆಗಳನ್ನು ಹರಡಿರುವ ಮತ್ತು ಅವುಗಳ ಮೇಲೆ ತನ್ನ ಟೊಂಗೆಗಳು ಆಧಾರಿತವಾಗಿರುವ ಮತ್ತು ವ್ಯಾಸದಲ್ಲಿ 51/2 ಸೆಂ. ಗಿಂತ ಕಡಿಮೆಯಿಲ್ಲದ ಮತ್ತು ಭೂಮಿಯ ಮಟ್ಟದಿಂದ ಒಂದು ಮೀಟರ್ ಎತ್ತರಕ್ಕಿಂತ ಕಡಿಮೆ ಇಲ್ಲದ ಕಾಂಡ ಅಥವಾ ಮುಖ್ಯ ಭಾಗವನ್ನು ಹೊಂದಿರುವ ಯಾವುದೇ ಮರದ ಸಸಿ ಮತ್ತು ತಾಳೆ ಮರ, ಬಿದಿರು, ಮರದ ಮೋಟು, ಕುರುಚಲು ಗಿಡ, ಬೆತ್ತಗಳು ಮತ್ತು ಅಂಥ ಮರದ ಸಸಿಗಳು- ಇವು ಒಳಗೊಳ್ಳುತ್ತವೆ; ಆದರೆ ಇದು ಶ್ರೀಗಂಧ ಮತ್ತು ಬೀಟೆ ಮರಗಳನ್ನು ಒಳಗೊಳ್ಳುವುದಿಲ್ಲ.

**ಮರದ ಅಧಿಕಾರಿ:** ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆಯನ್ನು ಜಾರಿ ಮಾಡಲು ಅರಣ್ಯಾಧಿಕಾರಿಗಳು ಮರದ ಅಧಿಕಾರಿಗಳಾಗಿರುತ್ತಾರೆ. ಬೃಹತ್ ನಗರ ಪಾಲಿಕೆಗೆ ಹಾಗೂ ಅನುಸೂಚಿ-1ರ ಗ್ರಾಮೀಣ ಪ್ರದೇಶಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ನಗರ ಮನಿಸಿಪಾಲಿಟಿಗಳಿಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಪಟ್ಟಣ ಪ್ರದೇಶಗಳು ಹಾಗೂ ಅನುಸೂಚಿ-2 ರ ಪ್ರದೇಶಕ್ಕೆ ವಲಯ ಅರಣ್ಯಾಧಿಕಾರಿ ಮರದ ಅಧಿಕಾರಿಗಳಾಗಿರುತ್ತಾರೆ.

**"ಮರದ ಪ್ರಾಧಿಕಾರ"** ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆಯಲ್ಲಿ ಮರಗಳ ಪ್ರಾಧಿಕಾರ ಸ್ಥಾಪನೆಗೆ ಅವಕಾಶವಿದ್ದು ನಗರ ಪ್ರದೇಶಕ್ಕೆ ಹಾಗೂ ಗ್ರಾಮೀಣ ಪ್ರದೇಶಕ್ಕೆ ಪ್ರತ್ಯೇಕ ಪ್ರಾಧಿಕಾರಗಳಿವೆ. ಗ್ರಾಮೀಣ ಪ್ರದೇಶಗಳನ್ನು ಅನುಸೂಚಿ-1 ಹಾಗೂ 2 ಎಂದು ವಿಂಗಡಿಸಲಾಗಿದೆ. ಅನುಸೂಚಿ-1ರಲ್ಲಿ ಟೀ, ರಬ್ಬರ್, ಸಿಂಕೋನ ಸಾಗುವಳಿಯ ಭೂಮಿ ಮತ್ತು ರಾಜ್ಯ ಸರ್ಕಾರಕ್ಕೆ ಸೇರಿದ್ದು ಇತರರಿಗೆ ಬಿಟ್ಟು ಕೊಡಲಾದ ಅರಣ್ಯ ಭಾಗ ಮತ್ತು ಭೂಮಿಗಳನ್ನು ಒಳಗೊಳ್ಳುವ ಪ್ರದೇಶಗಳು ಸೇರಿವೆ. ಅನುಸೂಚಿ-1ರಲ್ಲಿ ಕಾಫಿ, ಏಲಕ್ಕಿ ಹಾಗೂ ಕೋಕೋ ತೋಟಗಳು ಸಹ ಸೇರಿದ್ದು ದಿನಾಂಕ: 11/05/1998 ರ ತಿದ್ದುಪಡಿಯಲ್ಲಿ ಇವುಗಳನ್ನು ಅನುಸೂಚಿ-1ರಿಂದ ಬಿಡಲಾಗಿದೆ. ಅನುಸೂಚಿ-2ರಲ್ಲಿ 1ನೇ ಅನುಸೂಚಿಯಲ್ಲಿ ಸೇರಿದಂಥವುಗಳನ್ನು ಹೊರತಾಗಿ ಇತರ ಭೂಮಿಗಳನ್ನು ಒಳಗೊಂಡ ಪ್ರದೇಶಗಳಾಗಿದೆ.

**ಮರಗಳ ಪ್ರಾಧಿಕಾರದ ಕರ್ತವ್ಯಗಳು**

1) ಪ್ರಾಧಿಕಾರವು ತನ್ನ ಅಧಿಕಾರ ವ್ಯಾಪ್ತಿಯೊಳಗಿರುವ ಎಲ್ಲ ಮರಗಳ ಸಂರಕ್ಷಣೆ; ಹಾಲಿ ಇರುವ ಮರಗಳನ್ನು ಗಣತಿ ಮಾಡುವುದು ಮತ್ತು ಅವಶ್ಯವೆಂದು ಪರಿಗಣಿಸಿದಾಗ, ತಮ್ಮ ಭೂಮಿಗಳಲ್ಲಿರುವ ಮರಗಳ ಸಂಖ್ಯೆಯ ಬಗ್ಗೆ ಅವುಗಳ ಎಲ್ಲ ಒಡೆಯರಿಂದ ಅಥವಾ ಅಧಿಭೋಗದಾರರಿಂದ ಘೋಷಣಾ ಪತ್ರಗಳನ್ನು ಪಡೆಯುವುದು;
2) ಪ್ರತಿಯೊಂದು ಸ್ಥಳ, ಭೂಮಿಯ ತರಹೆ ಮತ್ತು ಅದರ ಆಸುಪಾಸುಗಳಲ್ಲಿ ಇರಬೇಕಾದ ಮತ್ತು ಗ್ರಾಮೀಣ ಪ್ರದೇಶಗಳ ಸಂದರ್ಭದಲ್ಲಿ, ಪ್ರತಿ ಹೆಕ್ಟೇರಿಗೆ ಐದು ಮರಗಳಿಗಿಂತ ಕಡಿಮೆಯಾಗದಂತೆ ನೆಡಬೇಕಾದ ಮರಗಳ ಸಂಖ್ಯೆಯ ಮತ್ತು ಬಗೆಯ ಪ್ರಮಾಣಗಳನ್ನು ನಿರ್ದಿಷ್ಟಪಡಿಸುವುದು;
3) ಸಸಿಗಳ, ಮಡಿಗಳ ಅಭಿವೃದ್ಧಿ ಪೋಷಣೆ; ಹೊಸ ಮರಗಳನ್ನು ನೆಡಲು ಅಥವಾ ಕೆಡವಿದ ಮರಗಳ ಬದಲಾಗಿ ಬೇರೆಯದನ್ನು ನೆಡಲು ಇಚ್ಛೆಯುಳ್ಳ ಅಥವಾ ಹಾಗೆ ಅಗತ್ಯಪಡಿಸಲಾದ ವ್ಯಕ್ತಿಗಳಿಗೆ ಬೀಜಗಳು, ಸಸಿಗಳು ಮತ್ತು ಮರಗಳನ್ನು ಸರಬರಾಜು ಮಾಡುವುದು.
4) ಹೊಸ ರಸ್ತೆಗಳ ನಿರ್ಮಾಣದಿಂದಾಗಿ ಅಥವಾ ಇರುವ ರಸ್ತೆಗಳನ್ನು ಅಗಲಮಾಡುವುದರಿಂದಾಗಿ ಅಗತ್ಯವಾಗುವ ಮರಗಳನ್ನು ನೆಡುವುದು ಮತ್ತು ಸ್ಥಳಾಂತರಿಸುವುದು ಅಥವಾ ರಸ್ತೆಗಳ ಪಕ್ಕದಲ್ಲಿ ಬೆಳೆಯದೆ ಇರುವ ಮರಗಳ ಬದಲಾಗಿ ಬೇರೆ ಮರಗಳನ್ನು ನೆಡುವುದು ಅಥವಾ ಜೀವ ಮತ್ತು ಸ್ವತ್ತನ್ನು ಅಪಾಯದಿಂದ ರಕ್ಷಿಸುವುದು.
5) ಮರ ಸಂರಕ್ಷಣಾ ಕಾಯ್ದೆಯ ಉದ್ದೇಶಗಳಿಗಾಗಿ ಪ್ರತ್ಯಕ್ಷ ಪ್ರಯೋಗಗಳನ್ನು ಮತ್ತು ವಿಸ್ತರಣಾ ಸೇವೆಗಳನ್ನು ಏರ್ಪಡಿಸುವುದು ಮತ್ತು ಮರಗಳನ್ನು ನೆಡುವುದಕ್ಕೆ ಮತ್ತು ಅವುಗಳ ಸಂರಕ್ಷಣೆಗೆ ಸಂಬಂಧಿಸಿದ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಸಹಾಯ ನೀಡುವುದು.
6) ಅವಶ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಮರಗಳನ್ನು ಗೊತ್ತುಪಡಿಸಿದ ಪ್ರಮಾಣಗಳಿಗನುಸಾರವಾಗಿ ರಸ್ತೆಗಳ ಪಕ್ಕದಲ್ಲಿ, ಸಾರ್ವಜನಿಕ ಉದ್ಯಾನಗಳಲ್ಲಿ ಮತ್ತು ತೋಟಗಳಲ್ಲಿ ಮತ್ತು ನದಿಗಳ ಅಥವಾ ಸರೋವರಗಳ ಅಥವಾ ಸಮುದ್ರದ ದಂಡೆಯ ಮೇಲೆ ನೆಡುವುದು ಮತ್ತು ಅವುಗಳನ್ನು ಪೋಷಿಸುವುದು.

**ಮರಗಳ ಕೆಡಹುವುದರ ಮೇಲೆ ನಿರ್ಬಂಧ**

ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ರೂಢಿ, ಆಚರಣೆ, ಕರಾರು ಅಥವಾ ಕಾನೂನಿನಲ್ಲಿ ಏನೇ ಇದ್ದರೂ ಯಾವನೇ ವ್ಯಕ್ತಿಯು ತನ್ನ ಒಡೆತನದಲ್ಲಿರುವ ಅಥವ ಅಧಿಭೋಗದಲ್ಲಿರುವ ಅಥವಾ ಇತರ ರೀತಿಯಲ್ಲಿರುವ ಯಾವುದೇ ಭೂಮಿಯಲ್ಲಿನ ಯಾವುದೇ ಮರವನ್ನು ಮರಗಳ ಅಧಿಕಾರಿಯ ಪೂರ್ವಾನುಮತಿಯಿಲ್ಲದೆ ಗೊತ್ತುಪಡಿಸಿದ ದಿನಾಂಕದಂದು ಅಥವಾ ದಿನಾಂಕದಿಂದ ಕೆಡಹತಕ್ಕುದಲ್ಲ ಅಥವಾ ಕೆಡವಿಸತಕ್ಕದಲ್ಲ. ಮರವನ್ನು ಕೆಡವಲು ಇಚ್ಛಿಸುವ ಯಾವನೇ ವ್ಯಕ್ತಿಯು, ಸಂಬಂಧಪಟ್ಟ ಮರಗಳ ಅಧಿಕಾರಿಗೆ ಆ ಬಗ್ಗೆ ಅನುಮತಿಗಾಗಿ ಲಿಖಿತ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿಯ ಜೊತೆಗೆ ನಿವೇಶನ ಅಥವಾ ಸರ್ವೆ ನಂಬರುಗಳನ್ನು ಕಡಿಯಬೇಕಾಗಿರುವ ಮರಗಳ ಸಂಖ್ಯೆ, ಜಾತಿ, ಮತ್ತು ಸುತ್ತಳತೆಯನ್ನು ಮತ್ತುಕಡಿಯಲು ಇರುವ ಕಾರಣಗಳನ್ನು ಸ್ಪಷ್ಟವಾಗಿ ನಿರ್ದಿಷ್ಟ ಪಡಿಸಿರುವ ನಿವೇಶನದ ನಕ್ಷೆ ಅಥವಾ ಸರ್ವೆ ನಕ್ಷೆಯನ್ನು ಮತ್ತು ಅದರ ಒಡೆಯ ಅಥವಾ ಅಧಿಭೋಗದಾರನ ಅನುಮತಿ ಪತ್ರವನ್ನು ಲಗತ್ತಿಸತಕ್ಕದು.

ಅರ್ಜಿಯುಬಂದ ತರುವಾಯ, ಮರಗಳ ಅಧಿಕಾರಿಯು ಮರವನ್ನು ಪರಿಶೀಲಿಸಿ ಮತ್ತು ಅವಶ್ಯವೆಂದು ಭಾವಿಸಬಹುದಾದಂಥ ತನಿಖೆಯನ್ನು ನಡೆಸಿದ ತರುವಾಯ, ಪೂರ್ಣವಾಗಿ ಅಥವಾ ಭಾಗಶಃ ಅನುಮತಿಯನ್ನುಕೊಡಬಹುದು ಅಥವಾ ಅನುಮತಿಯನ್ನು ನಿರಾಕರಿಸಬಹುದು.

ಪರಂತು ಕೆಳಕಂಡ ಸಂದರ್ಭಗಳಲ್ಲಿ, ಮರವನ್ನು ಕಡಿಯಲು ಅನುಮತಿಯನ್ನು ನಿರಾಕರಿಸತಕ್ಕುದಲ್ಲ.

1 ಮರವು ಒಣಗಿ ಹೋಗಿದ್ದರೆ, ರೋಗಗ್ರಸ್ಥವಾಗಿದ್ದರೆ ಅಥವಾ ಗಾಳಿಯಿಂದ ಬಿದ್ದು ಹೋಗಿದ್ದರೆ; ಅಥವಾ
2 ಮರ ಬೆಳೆಸುವ ಶಾಸ್ತ್ರದ ಪ್ರಕಾರ ಮರವು ಬಲಿತಿದ್ದರೆ; ಅಥವಾ
3 ಜೀವಕ್ಕೆ ಅಥವಾ ಸತ್ತಿಗೆ ಮರವು ಹಾನಿ ಉಂಟು ಮಾಡುವಂತಿದ್ದರೆ;
4 ಮರವು ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತಿದ್ದರೆ; ಅಥವಾ
5 ಬೆಂಕಿಯಿಂದ, ಸಿಡಿಲಿನಿಂದ, ಮಳೆಯಿಂದ ಅಥವಾ ಇತರ ಪ್ರಾಕೃತಿಕ ಕಾರಣಗಳಿಂದ ಬಹುಮಟ್ಟಿಗೆ ಹಾನಿಗೊಳಗಾಗಿದ್ದರೆ ಅಥವಾ ನಾಶವಾಗಿದ್ದರೆ; ಅಥವಾ
6 ಅನುಸೂಚಿ–2ರಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಗಳಲ್ಲಿ, ಸಾಗುವಳಿಯ ವಿಸ್ತರಣೆಗಾಗಿ ಅಥವಾ ಅರ್ಜಿದಾರನ ನಿಜವಾದ ಉಪಯೋಗಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮರವನ್ನು ತೆಗೆದು ಹಾಕಬೇಕಾಗಿದ್ದರೆ. ಆದರೆ ಸಾಗುವಳಿ ಮಾಡುವ ಪ್ರದೇಶದಲ್ಲಿ ಎಲ್ಲಾ ಮರಗಳನ್ನು ತೆಗೆಯಲು, ಸಾಗುವಳಿ ವಿಸ್ತರಣೆ ಅಥವಾ ಬೆಳೆ ಬದಲಾವಣೆ ಹಾಗೂ ಅರ್ಜಿದಾರರ ಸ್ವಂತ ಉಪಯೋಗಕ್ಕೆ ಮೇಲಿನದು ಅನ್ವಯಿಸುವುದಿಲ್ಲ.

**ಕುಟುಂಬದ ಮನೆ ಬಳಕೆಗಾಗಿ ಮರ ಕೆಡುವುದು (ಸ್ವಂತ ಉಪಯೋಗ)**

ವಾಸ್ತವವಾಗಿ ಕುಟುಂಬದ ಮನೆ ಬಳಕೆಗಾಗಿ ಅಂಥ ಕುಟುಂಬದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ಅವರು ಹಾಗೆ ಮಾಡಲು ಹಕ್ಕುಳ್ಳವರಾಗಿದ್ದರೆ, ಒಟ್ಟಿನಲ್ಲಿ ಕ್ಯಾಲೆಂಡರ್ ವರ್ಷಕ್ಕೆ 2.80 ಘನ ಮೀಟರು (100 ಘನ ಅಡಿ) ಗಳಿಗಿಂತ ಹೆಚ್ಚಿಲ್ಲದ ಚೌಬೀನೆ(ಟಿಂಬರ್), 50 ಸರಳು ಹಾಗೂ ಬಿದಿರುಗಳು, ಮತ್ತು ಐದು ಟನ್‌ಗಳಷ್ಟು ಸೌದೆಯನ್ನು ದೊರಕಿಸುವಷ್ಟು ಸಂಖ್ಯೆಯ ಮರಗಳನ್ನು ಕೆಡವಬಹುದು.

**ಅನುಮತಿಯಿಲ್ಲದೆ ಕೆಡವಬಹುದಾದ ಮರಗಳು**

ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮದ ಪ್ರಕಾರ ಈ ಕೆಳಗಿನ ಮರಗಳನ್ನು ಭೂಮಿಯ ಒಡೆಯನು ಅಥವಾ ಅಧಿಭೋಗದಾರನು ಕೆಡವಲು ಮರದ ಅಧಿಕಾರಿಯ ಅನುಮತಿಯಿಂದ ಹೊರತುಪಡಿಸಿದೆ. 1. ಅಕೇಶಿಯಾ ಹೈಬ್ರಿಡ್, 2. ಅಕೇಶಿಯಾ ಮ್ಯಾಂಜಿಯಂ, 3. ದೊಡ್ಡ ಬೇವು, 4. ಅಡಿಕೆ, 5. ಬರ್ಮಾ ಬಿದಿರು, 6. ಗೋಡಂಬಿ, 7. ಸರ್ವೆ ಅಥವಾ ಗಾಳಿ, 8. ತೆಂಗು, 9. ಕಾಫಿ, 10. ದಡಪ/ಹಾಲಿವಾಣ, 11. ನೀಲಗಿರಿ, 12. ಗ್ಲಿರಿಸಿಡಿಯಾ, 13. ಸೀಬೆ, 14. ಹೆಬ್ಬೇವು, 15. ನಿಂಬೆ, 16. ಮಿಯಾಪ್ಸಿಸ್, 17. ರಬ್ಬರ್, 18 ಸಪೋಟ, 19 ಸೆಸ್‌ಬೇನಿಯಾ, 20. ಸಿಲ್ವರ್ ಓಕ್, 21. ಸುಬಾಬುಲ್– ಈ ಮರಗಳನ್ನು ಕಡಿಯಲು ಹಾಗೂ ಸಾಗಿಸಲು ಯಾವುದೇ ಅನುಮತಿ ಬೇಕಾಗಿರುವುದಿಲ್ಲ. ಹಳದಿ ಬಿದಿರು, ಬಳಂಜಿ, ಬಳ್ಳಾರಿ ಜಾಲಿ, ಹೈಗಾ ಮತ್ತು ಸೀಮೆಗಳ ಇವುಗಳನ್ನು ಕಡಿಯಲು ಅನುಮತಿ ಬೇಡ.

ಈ ಮೇಲಿನ 21 ಜಾತಿಯ ಮರಗಳು ಹಾಗೂ ಕೆಳಗೆ ನೀಡಿರುವ 21 ಜಾತಿಯ ಮರಗಳಿಗೆ ಸಾಗಾಣಿಕೆ ರಹದಾರಿಯಿಂದ ವಿನಾಯಿತಿ ನೀಡಲಾಗಿದೆ.

1. ರೇನ್‌ಟ್ರೀ, 2. ಎಲ್ಲಾ ಬೊಂಬು ಮರಗಳು (ದೊಡ್ಡ ಹಾಗೂ ಕಿರು ಬಿದಿರು ಮತ್ತು ಸೀಮೆಗಳ ಹೊರತುಪಡಿಸಿ), 3. ಎಲ್ಲಾ ಕ್ಯಾಸಿಯಾ ಮರಗಳು (ಕಕ್ಕೆ ಮರ ಹೊರತುಪಡಿಸಿ), 4. ಆಯಿಲ್ ಪಾಮ್ಸ್, 5. ಕ್ರಿಸ್‌ಮಸ್ ಟ್ರೀ, 6.ಕಿತ್ತಳೆ, 7. ಜಕರಂದ, 8. ಆನೆ ತೊರಡು ಕಾಯಿ, 9. ಛತ್ರಿಮರ, 10. ಆಕಾಶ ಮಲ್ಲಿಗೆ, 11. ನುಗ್ಗೆ, 12. ಹಿಪ್ಪು ನೇರಳೆ, 13. ಕರಿಬೇವು, 14. ಫೆಲ್ಟೋಫಾರ್ಮ್, 15. ಬಸವನ ಪಾದ, 16. ದೇವಕಣಿಗಲೆ, 17. ಉಬ್ಬಿನ ಮರ (ಪಾಲಿಯಾಲ್ತಿಯಾ), 18. ಸೀಮಾರೂಬ, 19. ನೀರುಕಾಯಿ ಮರ, 20. ತಬೂಬಿಯಾ ಮತ್ತು 21. ಟೆಕೋಮ. ಸಾಮಾನ್ಯವಾಗಿ ಬಯಲು ಸೀಮೆಯಲ್ಲಿ ಯಾವುದೇ ಮರಗಳನ್ನು ಕಡಿಯಲು ಅನುಮತಿ ಬೇಕಿರುವುದಿಲ್ಲ. (ಶ್ರೀಗಂಧ ಮತ್ತು ಬೀಟೆ ಹೊರತುಪಡಿಸಿ). ಕರಾವಳಿ, ಮಲೆನಾಡು ಹಾಗೂ ಅರೆ ಮಲೆನಾಡು ಪ್ರದೇಶಗಳಲ್ಲಿ ಮೇಲೆ ವಿನಾಯತಿ ನೀಡಿದ ಮರಗಳನ್ನು ಹೊರತುಪಡಿಸಿ ಉಳಿದ ಮರಗಳನ್ನು ಕಡಿಯಲು ನಿಯಮಾನುಸಾರ ಮರದ ಅಧಿಕಾರಿಯ ಅನುಮತಿ ಬೇಕಿರುತ್ತದೆ.

ಹೀಗೆ ಒಟ್ಟು 26 ಜಾತಿಯ ಮರಗಳಿಗೆ ಕಡಿತಲೆ ಅನುಮತಿ ಅವಶ್ಯಕವಿರುವುದಿಲ್ಲ. ಹಾಗೂ 42 ಜಾತಿಯ ಮರಗಳಿಗೆ ಸಾಣಿಕೆ ರಹದಾರಿಯಿಂದ ವಿನಾಯತಿ ನೀಡಿದೆ. ಈ ಪಟ್ಟಿಯಲ್ಲಿ ಮಾವಿನ ಮರವು ಸೇರಿದ್ದು ನಂತರ ಕೈ ಬಿಡಲಾಗಿದೆ. ಕಾರಣ ಸರಳೀಕರಣವನ್ನು ದುರುಪಯೋಗಪಡಿಸಿ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಇದ್ದ ದೊಡ್ಡ ಕಾಡು ಮಾವಿನ ಮರಗಳನ್ನು ಅತಿ ವೇಗದಲ್ಲಿ ಧರೆಗುರುಳಿಸಿದ್ದರಿಂದ ಮಾವಿನ ಮರವನ್ನು ಕಡಿತಲೆ ಅನುಮತಿಯ ನಿಬಂರ್ಧವನ್ನು ಮತ್ತೆ ಅನುಷ್ಠಾನಗೊಳಿಸಲಾಗುತ್ತಿದೆ.

**ಕಡಿದಂತೆ ಮರಗಳನ್ನು ನೆಡುವುದು**

ಕರ್ನಾಟಕ ಮರಗಳ ಸಂರಕ್ಷಣೆ ಕಾಯ್ದೆಯ ಪ್ರಕಾರ ಭೂಮಿಯ ಪ್ರತಿಯೊಬ್ಬ ಒಡೆಯನು ಅಥವಾ ಅಧಿಭೋಗದಾರನು ಮರದ ಪ್ರಾಧಿಕಾರವು

ನಿರ್ದಿಷ್ಟಪಡಿಸಿದ ಅವಧಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಗೊತ್ತುಪಡಿಸಿದ ಪ್ರಮಾಣಗಳಿಗನುಸಾರವಾಗಿ ಮರಗಳನ್ನು ನೆಡಬೇಕು. ಕಡವಲಾದ ಹಾಗೂ ಗಾಳಿ, ಬೆಂಕಿ, ಸಿಡಿಲು, ಭಾರಿ ಮಳೆ ಅಥವಾ ಇತರ ಪ್ರಾಕೃತಿಕ ಕಾರಣಗಳಿಂದ ಯಾವುದೇ ಮರವು ಬಿದ್ದಲ್ಲಿ ಅಥವಾ ನಾಶವಾದಲ್ಲಿ ಯುಕ್ತ ಸ್ಥಳದಲ್ಲಿ ಅದೇ ಜಾತಿಯ ಅಥವಾ ಇತರ ಜಾತಿಯ ಮರಗಳನ್ನು ನೆಡತಕ್ಕದ್ದು ಈ ಕಾಯ್ದೆಯಲ್ಲಿ ಮರಗಳ ದತ್ತು ಸ್ವೀಕಾರಕ್ಕೆ ಅವಕಾಶವಿದೆ.

**ಅಪೀಲು ಅವಕಾಶ**

ಈ ಕಾಯ್ದೆಯಲ್ಲಿ ಮರಗಳನ್ನು ಕಡಹುವುದು, ನೆಡುವುದು ಹಾಗೂ ನಾಶವಾದ ಮರಗಳ ಬದಲಿಗೆ ಬೇರೆಮರಗಳನ್ನು ನೆಡುವುದು ಇವುಗಳ ವಿಷಯದಲ್ಲಿ ಮರದ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು. ಮರಗಳ ಪ್ರಾಧಿಕಾರದ ತೀರ್ಮಾನವು ಅಂತಿಮವಾಗಿರುತ್ತದೆ.

**ದಂಡಗಳು ಹಾಗೂ ಕಾರ್ಯವಿಧಾನ**

ಕರ್ನಾಟಕ ಮರ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಮರಕ್ಕೆ ಸಂಬಂಧಿಸಿದಂತೆ ಅಪರಾಧವು ನಡೆದಿದೆಯೆಂದು ಮರದ ಅಧಿಕಾರಿಯು ನಂಬಲು ಕಾರಣವಿದ್ದಲ್ಲಿ ಸ್ವತ್ತು ಹಾಗೂ ವಾಹನಗಳನ್ನು ವಶಪಡಿಸಿಕೊಳ್ಳಲು, ಸ್ವತ್ತನ್ನು ಬಿಡುಗಡೆ ಮಾಡಲು, ವಾರೆಂಟಿಲ್ಲದೆ ದಸ್ತಗಿರಿ ಮಾಡಲು ಹಾಗೂ ದಸ್ತಗಿರಿಯಾದ ವ್ಯಕ್ತಿಯನ್ನು ಬಿಡುಗಡೆ ಮಾಡಲು ಮರದ ಅಧಿಕಾರಿಗೆ ಅಧಿಕಾರವಿರುತ್ತದೆ.

**ರಾಜಿ ತೀರ್ಮಾನ**

ಈ ಮೇಲಿನ ಕಾಯ್ದೆಯಡಿ ಅಪರಾಧವೆಸಗಿದಲ್ಲಿ ಮರದ ಅಧಿಕಾರಿಯು ಈ ಕೆಳಗಿನಂತೆ ರಾಜೀ ತೀರ್ಮಾನ ಮಾಡಲು ಅವಕಾಶವಿದೆ.

1. ಅಪರಾಧದಲ್ಲಿ ಭಾಗಿಯಾದ ಮರದ ಸ್ವತ್ತಿನ ಶೇ.25ರಷ್ಟು ಮೊತ್ತವನ್ನು ತಪ್ಪಿತಸ್ಥನು ಕಟ್ಟುವ ಮೂಲಕ.
2. ವಶಪಡಿಸಿಕೊಂಡ ಅಥವಾ ಮುಟ್ಟುಗೋಲಾಗ ಬಹುದಾದ ಯಾವುದೇ ಸ್ವತ್ತನ್ನು ಅಂಥ ಅಧಿಕಾರಿಯು ಅಂದಾನು ಮಾಡಿದ ಅದರ ಮೌಲ್ಯವನ್ನು ತಪ್ಪಿತಸ್ಥನು ಸಂದಾಯ ಮಾಡಿದ ಮೇಲೆ ಬಿಡುಗಡೆ ಮಾಡತಕ್ಕದ್ದು.

**ದಂಡ**

ಈ ಅಧಿನಿಯದ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ಮಾಡಿದ ಆದೇಶಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ಸಿದ್ಧವಾದ ಬಳಿಕ ಮೂರು ತಿಂಗಳುಗಳವರೆಗಿನ ಕಾರಾಗೃಹವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು. ಹಾಗೆ ಅಪರಾಧವು ಸ್ವತ್ತನ್ನು ರಾಜ್ಯ ಸರ್ಕಾರವು ಮುಟ್ಟುಗೋಲು ಮಾಡಿಕೊಳ್ಳತಕ್ಕದೆಂದು ನ್ಯಾಯಾಲಯವು ಆದೇಶ ಮಾಡಬಹುದು.

**ಕಡವಲಾದ ಮರ ಹಾಗೂ ಉತ್ಪನ್ನಗಳ ಸಾಗಣೆ**

ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆಯಡಿ ಕಡವಲಾದ ಮರಗಳನ್ನು ಕರ್ನಾಟಕ ಅರಣ್ಯ ಅಧಿನಿಯಮ ಹಾಗೂ ಕರ್ನಾಟಕ ಅರಣ್ಯ ನಿಯಮಗಳ ಮೇರೆಗೆ ನಿರ್ದಿಷ್ಟ ಪರವಾನಗಿ (ರಹದಾರಿ) ಪಡೆದು ಸಾಗಿಸಲು ಅವಕಾಶ ನೀಡಿದೆ. ಪರಂತು ಈ ಮೇಲೆ ತಿಳಿಸಿದ 42 ಜಾತಿಯ ಮರ ಹಾಗೂ ಅವುಗಳ ಸ್ವತ್ತುಗಳನ್ನು ಸಾಗಾಟ ಮಡಲು ರಹದಾರಿ ಬೇಕಿರುವುದಿಲ್ಲ.

**ಮರ ಸಂರಕ್ಷಣಾ ಕಾಯ್ದೆಯ ವಿವಿಧ ಉಪಬಂಧಗಳ ಜಾರಿ**

ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮದ ಎಲ್ಲಾ ಉಪಬಂಧಗಳು (ಸೆಕ್ಷನ್‌ಗಳು) ಈ ಕೆಳಗಿನ ಜಿಲ್ಲೆಗಳಲ್ಲಿ ಅನುಸೂಚಿ–1ರ ಗ್ರಾಮೀಣ ಪ್ರದೇಶಗಳಲಿ ಅನ್ವಯಿಸುತ್ತವೆ. 1) ಚಿಕ್ಕಮಗಳೂರು 2) ಹಾಸನ, 3) ಉತ್ತರ ಕನ್ನಡ, 4) ಶಿವಮೊಗ್ಗ, 5) ಮೈಸೂರು, 6) ಚಾಮರಾಜನಗರ, 7) ದಕ್ಷಿಣ ಕನ್ನಡ, 8) ಉಡುಪಿ, 9) ಕೊಡಗು ಆದರೆ ಈ ಜಿಲ್ಲೆಗಳಲ್ಲಿ ಈ ಕೆಳಗಿನ ಪ್ರದೇಶಗಳನ್ನು ಹೊರತುಪಡಿಸಿದೆ. (1) ಮೀಸಲು ಅರಣ್ಯ, (2)ಕೃಷಿ ವಿಶ್ವ ವಿದ್ಯಾನಿಲಯ ಅಥವಾ ತೋಟಗಾರಿಕಾ ಇಲಾಖೆಯಡಿಯಲ್ಲಿ ಮೇಲ್ವಿಚಾರಣೆ (ಕಂಟ್ರೋಲ್) ಹಾಗೂ ನಿರ್ವಹಣೆಯಲ್ಲಿರುವ ಭೂ ಪ್ರದೇಶ. (3) ಕಾಫಿ, ಟೀ ಹಾಗೂರಬ್ಬರ್ ತೋಟಗಾರಿಕೆಗಳಲ್ಲಿ ಹೆಕ್ಟೇರ್‌ಗೆ 750ಕ್ಕೆ ಕಡಿಮೆಯಿಲ್ಲದ ಗಿಡಗಳಿಂದ ಹಾಗೂ ರಬ್ಬರ್ ತೋಟದಲ್ಲಿ ಹೆಕ್ಟೇರ್ 225 ಕ್ಕಿಂತ ಕಡಿಮೆಯಿಲ್ಲದ ಗಿಡಗಳಿಂದ ಕೃಷಿ ಮಾಡುತ್ತಿರುವ ಪ್ರದೇಶಗಳು.

ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮದ ಅನುಸೂಚಿ–2 ರಲ್ಲಿರುವ ಗ್ರಾಮೀಣ ಪ್ರದೇಶಗಳಿಗೆ ಈ ಮೇಲಿನ 9 ಜಿಲ್ಲೆಗಳು ಹಾಗೂ ಖಾನಾಪುರ, ಶಿಗ್ಗಾಂವ್, ಹಾನಗಲ್, ಕಲಘಟಗಿ, ಧಾರವಾಡ ತಾಲ್ಲೂಕುಗಳಲ್ಲಿ ಎಲ್ಲಾ ಉಪಬಂಧಗಳು ಅನ್ವಯವಾಗುತ್ತವೆ.

ಈ ಮೇಲೆ ನಮೂದಿಸಿದ ತಾಲ್ಲೂಕು ಹಾಗು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಬಯಲು ಸೀಮೆ ಪ್ರದೇಶಗಳಿಗೆ ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮವು ಮರ ಕಡಿತಲೆಗೆ ಅನುಮತಿ ಬೇಕಿಲ್ಲ. ಆದರೆ, ಅವುಗಳ ಉತ್ಪನ್ನಗಳನ್ನು ಸಾಗಿಸಲು ಕರ್ನಾಟಕ ಅರಣ್ಯ ನಿಯಮದ ಪ್ರಕಾರ ರಹದಾರಿ ಅವಶ್ಯಕವಿದೆ. (ಮೇಲೆ ತಿಳಿಸಿದ 42 ಜಾತಿಯ ಮರಗಳು ಹಾಗೂ ಶ್ರೀಗಂಧ ಮತ್ತು ಬೀಟೆ ಜಾತಿಯ ಮರಗಳನ್ನು ಹೊರತುಡಿಸಿ).

**ಕರ್ನಾಟಕ ಮರ ಸಂರಕ್ಷಣಾ ಕಾಯ್ದೆಯ ತಿದ್ದುಪಡಿಗಳು ಮರ ಕಡಿತಲೆಗೆ ಸರಳೀಕರಣ**

ಕರ್ನಾಟಕ ರಜ್ಯವು ಮರ ಸಂರಕ್ಷಣಾ ಕಾಯ್ದೆಗೆ ಹಲವಾರು ಬಾರಿ (21.07.76, 29.07.77, 24.02.79, 22.09.78, 01.12.87, 11.05.98, 04.10.2000, 13.01.15 ಹಾಗೂ 07.12.2016) ತಿದ್ದುಪಡಿಗಳನ್ನು ಹಾಗೂ ಅಧಿಸೂಚನೆಗಳನ್ನು ತಂದು ಅದರಲ್ಲಿನ ಕೆಲವು ಅಡಚಣೆಗಳನ್ನು/ತೊಡಕುಗಳನ್ನು ತೆಗೆದು ಹಾಕಿ ಸರಳೀಕರಿಸಿದೆ. ಇದರಿಂದಾಗಿ ರೈತರು ತಮ್ಮ ಹಿಡುವಳಿಯಲ್ಲಿ ಮರಗಳನ್ನು ಬೆಳೆಸಿ ಕಡಿತಲೆ ಮಾಡಿ ಸಾಗಾಟ ಮಾಡುವುದಕ್ಕೆ ಅನುಕೂಲಗಳಾಗಿವೆ. ಇವುಗಳಲ್ಲಿ ಸ್ವಂತ ಉಪಯೋಗಕ್ಕೆ ಮರಕಡಿತಲೆ ಅನುಮತಿ ವಿನಾಯತಿ, ಈ ಹಿಂದೆ ತಿಳಿಸಿದ 26 ಜಾತಿಯ ಮರಗಳ ಕಡಿತಲೆ ಹಾಗೂ 42 ಜಾತಿಯ ಮರಗಳಿಗೆ ಸಾಗಾಣಿಕೆ ಅನುಮತಿ ಹಾಗೂ ರಹದಾರಿಯಿಂದ ಹೊರತುಪಡಿಸಿದ್ದು, ಮುಖ್ಯವಾಗಿ ರೈತಮುಖಿ ತಿದ್ದುಪಡಿ ಹಾಗೂ ಅಧಿಸೂಚನೆಗಳಾಗಿವೆ. ರೈತರ ಹಾಗೂ ಖಾಸಗಿ ಹಿಡುವಳಿಯಲ್ಲಿ ಬೆಳೆದ ಎಲ್ಲಾ ಮರಗಳಿಗೂ ಕಡಿತಲೆ ಹಾಗೂ ಸಾಗಾಣಿಕೆಗೆ ಯಾವುದೇ ಅನುಮತಿ / ನಿರ್ಭಂದಗಳಿಲ್ಲದೆ ಮುಕ್ತ ಅವಕಾಶಗಳಿರುವಂತೆ ಕಾಯ್ದೆಯನ್ನು ಸರಳೀಕರಣಗೊಳಿಸಿದರೆ ಕೃಷಿ ಅರಣ್ಯದಲ್ಲಿ ಬೆಳೆದ ಅರಣ್ಯ ಉತ್ಪನ್ನಗಳನ್ನು ಸುಲಭವಾಗಿ ವಿಲೆ ಮಾಡಲು ಅನುಕೂಲವಾಗುತ್ತದೆ.

**ಕಾಯ್ದೆಯಲ್ಲಿರುವ ಗೊಂದಲಗಳ ನಿವಾರಣೆ**

1. ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆಯಲ್ಲಿ ಅಧಿಸೂಚನೆ ಸಂಖ್ಯೆ 1ರಿಂದ IV FFDI00FDP ದಿನಾಂಕ: 20.07.76ರಲ್ಲಿ ನಗರ, ಪಟ್ಟಣ ಹಾಗೂ ಅನುಸೂಚಿ–1 ಮತ್ತು 2ರ ಗ್ರಾಮೀಣ ಪ್ರದೇಶಗಳಲ್ಲಿ ಕಾಯ್ದೆಯ ಉಪಬಂಧಗಳನ್ನು (ಸೆಕ್ಷನ್‌ಗಳು) ಜಾರಿ ಮಾಡಲು ಗೊಂದಲಗಳಿವೆ. ಉದಾಹರಣೆಗೆ ಮೈಸೂರು ಜಿಲ್ಲೆಯ ಕೆ.ಆರ್.ನಗರ, ನಂಜನಗೂಡು ಮತ್ತು ಟಿ.ನರಸೀಪುರ ತಾಲ್ಲೂಕುಗಳು ಹಾಗೂ ಹಾಸನ ಜಿಲ್ಲೆಯ ಹೊಳೆನರಸೀಪುರ, ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕುಗಳು ಅನುಸೂಚಿ–1ರಲ್ಲಿ ಸೇರಿದ್ದು ಅವುಗಳನ್ನು ಅನುಸೂಚಿ–2 ರಲ್ಲಿ ತರಬೇಕು. ಅನುಸೂಚಿ–1ಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಮರದ ಅಧಿಕಾರಿಯಾಗಿದ್ದು, ಅನುಸೂಚಿ–2ರ ಪ್ರದೇಶಗಳಿಗೆ ವಲಯ ಅರಣ್ಯಾಧಿಕಾರಿ ಮರದ ಅಧಿಕಾರಿಯಾಗಿರುವುದುದರಿಂದ ವಲಯದ ಮಟ್ಟದಲ್ಲೇ ಮರ ಬೆಳೆಸಿದವರಿಗೆ ಸಹಾಯವಾಗುತ್ತದೆ. ಅನುಸೂಚಿ–2ರ ಪ್ರದೇಶದಲ್ಲಿರುವ ಯಾವುದೇ ಮರಗಳಿಗೆ (ಶ್ರೀಗಂಧ ಮತ್ತು ಬೀಟೆ ಹೊರತುಪಡಿಸಿ) ಕಡಿತಲೆ ಅನುಮತಿ ಬೇಕಿರುವುದಿಲ್ಲ.
2. ಈಗಿನ ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮದ ವ್ಯಾಪ್ತಿಗೆ ಶ್ರೀಗಂಧ ಮತ್ತು ಬೀಟೆ ಮರಗಳು ಸೇರಿರುವುದಿಲ್ಲ. ರಕ್ತ ಚಂದನವು ಸೇರಿದಂತೆ ಶ್ರೀಗಂಧ ಮತ್ತು ಬೀಟೆ ಮರಗಳನ್ನು ಕಾಯ್ದೆ ವ್ಯಾಪ್ತಿಗೆ ಸೇರಿಸಬೇಕು.
3. ಮರಗಳನ್ನು ಸ್ವಂತ ಉಪಯೋಗದಡಿ (Bonfide use) ಮನೆಕಟ್ಟಲು, ಪೀಠೋಪಕರಣಕ್ಕೆ ಉಪಯೋಗಿಸುವ ಜೊತೆಗೆ ಭೂಮಿಯ ಒಡೆಯ ಅಥವಾ ಅಧಿಭೋಗದಾರನ ಕುಟುಂಬದ ಆರೋಗ್ಯ, ಶಿಕ್ಷಣ, ಮದುವೆ, ಹಾಗೂ ಹಬ್ಬ–ಹರಿದಿನ ಇತರೆ ಸಂಪ್ರದಾಯಗಳ ಖರ್ಚು ವೆಚ್ಚಗಳಿಗೂ ಮರದ ಅಧಿಕಾರಿಯ ಅನುಮತಿಯಿಲ್ಲದೆ ಮರ ಕಡಿವಿ, ಸಾಗಾಟ ಮಾಡುವಂತಾಗಬೇಕು.

(4) ಕರ್ನಾಟಕ ಮರ ಸಂರಕ್ಷಣಾ ಅಧಿನಿಯಮಕ್ಕೆ ದಿನಾಂಕ: 11.05.1998ರ ತಿದ್ದುಪಡಿಗೆ ಹಿಂದೆ ಇದ್ದಂತೆ ಮರಗಳ ಅಧಿಕಾರಿಯು ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ಅನುಸೂಚಿ-1ರ ಗ್ರಾಮೀಣ ಪ್ರದೇಶದಲ್ಲಿ ಒಂದು ವರ್ಷದೊಳಗೆ ಹಾಗೂ ನಗರ ಮತ್ತು ಅನುಸೂಚಿ 2ರ ಗ್ರಾಮೀಣ ಪ್ರದೇಶಗಳಲ್ಲಿ 60 ದಿನಗಳೊಳಗಾಗಿ ತಿಳಿಸಲು ತಪ್ಪಿದರೆ ಅಂಥ ಅನುಮತಿಯನ್ನು ಕೊಡಲಾಗಿದೆಯೆಂದು ಭಾವಿಸತಕ್ಕದ್ದು ಎಂದು ಇದ್ದ ಅವಕಾಶವನ್ನು ಮರು ಸೇರಿಸಬೇಕು.

(5) ದಿನಾಂಕ: 11.05.1998ರ ತಿದ್ದುಪಡಿಯಲ್ಲಿ ಕಾಫಿ, ಏಲಕ್ಕಿ ಹಾಗೂ ಕೋಕೋ ಪ್ರದೇಶಗಳನ್ನು ಅನುಸೂಚಿ-1 ರಿಂದ ಕೈ ಬಿಡಲಾಗಿದೆ. ಅಂದರೆ ಇವು ಅನುಸೂಚಿ-2ರ ಪ್ರದೇಶಕ್ಕೆ ಸೇರಿದ್ದು ಇಲ್ಲಿ ವಲಯ ಅರಣ್ಯಾಧಿಕಾರಿಗಳು ಮರದ ಅಧಿಕಾರಿಯಾಗಿರುತ್ತಾರೆ. ಆದರೆ ಈಗಲೂ ಅನುಸೂಚಿ-2ರ ಪ್ರದೇಶಗಳಿಗೆ ಅರಣ್ಯ ಸಂರಕ್ಷಣಾಧಿಕಾರಿಗಳೆ ಆದೇಶ ಮಾಡುತ್ತಿರುವುದರಿಂದ ಇದನ್ನು ಸರಳೀಕರಣ ಮಾಡಬಹುದೆ ಎಂಬುದರ ಬಗ್ಗೆ ನಿರ್ಧಾರ ಮಾಡಬೇಕು.

ಈ ಮೇಲೆ ವಿವರಿಸಿದಂತೆ ಕಾನೂನು, ಹಾಗೂ ನಿಯಮಗಳನ್ನು ಅರಿತು, ಅವುಗಳಲ್ಲಿರುವ ತೊಡಕುಗಳನ್ನು ತೆಗೆದು ಹಾಕಿದಲ್ಲಿ ರೈತರು ಅವರ ಹಿಡುವಳಿಯಲ್ಲಿ ಮರಗಿಡಗಳನ್ನು ನಿರಾತಂಕವಾಗಿ ಬೆಳೆದು ಕಡಿದು, ಸಾಗಿಸಿ ಹಾಗೂ ಮಾರಾಟ ಮಾಡಿ ಒಳ್ಳೆಯ ಬಾಳನ್ನು ಮಾಡಿ ಕೃಷಿ ಅರಣ್ಯದ ಉದ್ದೇಶಗಳನ್ನು ಸಫಲಗೊಳಿಸಿದಂತಾಗುತ್ತದೆ. ■

## ವರದಿ

### ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಅಕ್ಟೋಬರ್-ಡಿಸೆಂಬರ್ 2021ರವರೆಗಿನ ಕಾರ್ಯಕ್ರಮಗಳು


**ಕಾರ್ಯದರ್ಶಿ, ಕೃಷಿ ಅರಣ್ಯ ಸಂಸ್ಥೆ, ಮೊ: 94480 19306**

1. ಸಂಸ್ಥೆಯ ಕಾರ್ಯದರ್ಶಿಗಳು ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ 2021ರ ಮಾಹೆಗಳಲ್ಲಿ ಭಾರತೀಯ ಅರಣ್ಯ ಅಧಿನಿಯಮ, ಕರ್ನಾಟಕ ಅರಣ್ಯ ಅಧಿನಿಯಮ ಹಾಗೂ ಅರಣ್ಯ ಸಂರಕ್ಷಣಾ ಅಧಿನಿಯಮ ಇವುಗಳ ಬಗ್ಗೆ 7 ತಂಡಗಳಲ್ಲಿ ರಾಜ್ಯದ 210 ಸೀನಿಯರ್ ಸಿವಿಲ್ ನ್ಯಾಯಾಧೀಶರುಗಳಿಗೆ ಕರ್ನಾಟಕ ಜ್ಯುಡಿಷಿಯಲ್ ಅಕಾಡೆಮಿ ವತಿಯಿಂದ ಆಯೋಜಿಸಿದ್ದ 'ಪರಿಸರ ಕಾನೂನು ಕಾರ್ಯಾಗಾರ'ದಲ್ಲಿ ಆನ್ಲೈನ್ ಮೂಲಕ ಉಪನ್ಯಾಸಗಳನ್ನು ನೀಡಿರುತ್ತಾರೆ. ಈ ಸಂದರ್ಭದಲ್ಲಿ ಭಾರತದ ರಾಷ್ಟ್ರೀಯ ಅರಣ್ಯ ನೀತಿಯಂತೆ ಅರಣ್ಯವನ್ನು ಹೆಚ್ಚಿಸಲು ಸಾಮಾಜಿಕ ಅರಣ್ಯ, ಕೃಷಿ ಅರಣ್ಯ ಹೆಚ್ಚಿಸುವ ಬಗ್ಗೆಯೂ ವಿವರಿಸಲಾಗಿದೆ. ಅರಣ್ಯ ಸಂಪನ್ಮೂಲಗಳ ಸಂರಕ್ಷಣೆಯ ಬಗ್ಗೆ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ತೀರ್ಪುಗಳ ಚರ್ಚೆಯೊಂದಿಗೆ ಮಾನ್ಯ ನ್ಯಾಯಾಧೀಶರುಗಳೊಡನೆ ಮಾಹಿತಿ ಹಂಚಿಕೊಳ್ಳಲಾಯಿತು.
2. ದಿ:11-10-2021ರಂದು ವಿಜಯಪುರ ಜಿಲ್ಲೆಯ ಪ್ರಾದೇಶಿಕ, ಸಾಮಾಜಿಕ ಹಾಗೂ ಆಲಮಟ್ಟಿ ಅರಣ್ಯ ವಿಭಾಗಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಅರಣ್ಯ ಕಾನೂನು ಹಾಗೂ ಕೌಶಲ್ಯಾಭಿವೃದ್ಧಿ ಮತ್ತು ಕೃಷಿ ಅರಣ್ಯದ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಸಂಸ್ಥೆಯ ಕಾರ್ಯದರ್ಶಿಗಳು ನಡೆಸಿದರು.
3. ದಿ:19-11-2021ರಂದು ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ 39ನೇ ಕಾರ್ಯಕಾರಿ ಸಮಿತಿ ಸಭೆಯನ್ನು ಶ್ರೀ ದೀಪಕ್ ಶರ್ಮರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು ಹಾಗೂ ಜುಲೈ-ಸೆಪ್ಟೆಂಬರ್ 2021ರ ಕೃಷಿವನ ಸಂಪುಟ-3, ಸಂಚಿಕೆ-3ನ್ನು ಶ್ರೀ ರಾಜೀವ್ ರಂಜನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಇವರು ಮುಖ್ಯ ಅತಿಥಿಗಳಾಗಿ ಬಿಡುಗಡೆ ಮಾಡಿದರು.
4. ನವೆಂಬರ್ 25 ಮತ್ತು 26ರಂದು ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಅರೆ ಮಲೆನಾಡು ಹಾಗೂ ಮಲೆನಾಡು ಪ್ರದೇಶಗಳಲ್ಲಿ ಕೃಷಿ ಅರಣ್ಯ ಉತ್ತೇಜಿಸಲು ಕಾರ್ಯದರ್ಶಿಯವರು ಪ್ರವಾಸ ಮಾಡಿ ರೈತರೊಡನೆ ಚರ್ಚಿಸಿರುತ್ತಾರೆ.
5. ದಿ:27-11-2021ರಂದು ಡಾ.ಎಂ.ಹೆಚ್. ಮರಿಗೌಡ ತೋಟಗಾರಿಕೆ, ಶಿಕ್ಷಣ ಹಾಗೂ ಸಂಶೋಧನಾ ಪ್ರತಿಷ್ಠಾನ, ಭಾರತ ವೃಕ್ಷ ಕೃಷಿ ಸಂಘ, ತೋಟಗಾರಿಕೆ ಇಲಾಖೆ ಹಾಗೂ ಅಲ್ಯೂಮ್ನಿ ಅಸೋಸಿಯೇಷನ್ (ಯುಎಎಸ್ ಬೆಂಗಳೂರು) ಇವರು ಆಯೋಜಿಸಿದ್ದ, 'ಕರ್ನಾಟಕದಲ್ಲಿ ಬಟರ್‌ಫ್ರೂಟ್ (ಅವಕ್ಯಾಡೋ) ವೈಜ್ಞಾನಿಕ ಬೇಸಾಯ'ದ ಬಗ್ಗೆ ರಾಜ್ಯ ಮಟ್ಟದ ಸೆಮಿನಾರ್‌ನಲ್ಲಿ ಈ ಸಂಸ್ಥೆಯ ಕಾರ್ಯದರ್ಶಿ, ಖಜಾಂಚಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಸ್. ನಾರಾಯಣ ಸ್ವಾಮಿ, ಅಜೀವ ಸದಸ್ಯರಾದ ಡಾ.ಎಸ್.ವಿ. ಹಿತ್ತಲಮನಿ ಇತರರು ಭಾಗವಹಿಸಿದ್ದರು.
6. ದಿ:03-12-2021ರಂದು ಕೇಂದ್ರ ಸರ್ಕಾರದ ಬೆಂಗಳೂರಿನಲ್ಲಿರುವ Khadi and Village Industries Commission ಪ್ರಾದೇಶಿಕ ಕಛೇರಿಗೆ ಸಂಸ್ಥೆಯ ಕಾರ್ಯದರ್ಶಿ ಹಾಗೂ ಮಂಡ್ಯ ಕೃಷಿ ವಿಜ್ಞಾನ ಪದವೀಧರರ ಪದಾಧಿಕಾರಿಗಳು ಭೇಟಿ ನೀಡಿ ಗ್ರಾಮೀಣ ಪ್ರದೇಶದಲ್ಲಿ ಜೇನು ಸಾಕಾಣಿಕೆ ಹಾಗೂ ಪ್ರಧಾನ ಮಂತ್ರಿ ಉದ್ಯೋಗ ಸೃಷ್ಠಿ ಕಾರ್ಯಕ್ರಮಗಳ ಬಗ್ಗೆ ನಿರ್ದೇಶಕರು ಹಾಗೂ ಅಧಿಕಾರಿಗಳೊಡನೆ ವಿಚಾರ ವಿನಿಮಯ ಮಾಡಲಾಯಿತು.
7. ದಿ:05-12-2021ರಂದು ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ 40ನೇ ಕಾರ್ಯಕಾರಿ ಸಮಿತಿ ಸಭೆಯನ್ನು ಶ್ರೀ ದೀಪಕ್ ಶರ್ಮರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.
8. ದಿ:10-12-2021ರಂದು ಸಂಸ್ಥೆಯ ಕಾರ್ಯದರ್ಶಿ ಹಾಗೂ ಸದಸ್ಯರು ಮಂಡ್ಯ ಕೃಷಿ ವಿಜ್ಞಾನ ಪದವೀಧರರ ಪದಾಧಿಕಾರಿಗಳೊಡನೆ ಮದ್ದೂರು ತಾಲ್ಲೂಕು ಹೆಮ್ಮನಹಳ್ಳಿ ಗ್ರಾಮದಲ್ಲಿ ಕೃಷಿಕರೊಡನೆ ಜೇನು ಸಾಕಾಣಿಕೆ ಹಾಗೂ ಅಣಬೆ ಬೇಸಾಯದ ಬಗ್ಗೆ ವಿಚಾರ ಗೋಷ್ಠಿ ನಡೆಸಲಾಯಿತು.
9. ಡಿಸೆಂಬರ್ 11 ಮತ್ತು 12ರಂದು ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಗುರುಮೂರ್ತಿಯವರ ನೆಲಮಂಗಲ ತಾಲ್ಲೂಕು ಕಲ್ಯಾಣಪುರದ ಕೃಷಿಅರಣ್ಯ ತೋಟದಲ್ಲಿ 'ಪರಿಯಾವರಣ ಸಂರಕ್ಷಣ ಗತಿ ವಿಧಿ ಕರ್ನಾಟಕ ದಕ್ಷಿಣ ಪ್ರಾಂತ'ಸಂಸ್ಥೆಯವರು ಮಣ್ಣು ಮತ್ತು ನೀರು ಸಂರಕ್ಷಣೆ, ಮರಗಿಡ ನೆಡುವುದು ಹಾಗೂ ಪ್ಲಾಸ್ಟಿಕ್ ಮುಕ್ತ ಪರಿಸರದ ಬಗ್ಗೆ ಎರಡು ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.
10. ದಿ:19-12-2021ರಂದು ಸಂಸ್ಥೆಯ ಅಕ್ಟೋಬರ್-ಡಿಸೆಂಬರ್ 2021ರ ಕೃಷಿವನ ಸಂಪುಟ-3, ಸಂಚಿಕೆ-4ನ್ನು ಬಿಡುಗಡೆ ಮಾಡಲಾಯಿತು. ಹಾಗೂ ಎಂಟನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು (2020-21) ನಡೆಸಲಾಯಿತು.

# ಸರಳ ತಂತ್ರಜ್ಞಾನಗಳ ಜನಕ 'ಸವ್ಯಸಾಚಿ'

✍ ಚಿನ್ನಸ್ವಾಮಿ ವಡ್ಡಗೆರೆ ಮೊ.93804 77210

(ಕೃಪೆ: ಬಂಗಾರದ ಮನುಷ್ಯರು ಬೆಳಕಿನ ಬೇಸಾಯದ ಕಥಾನಕ ಮಸ್ತಕ)



**ದಾಖಲೆಗಳ ಸರದಾರ**
**ಡಾ. ದೇವಂಗಿ ಪ್ರಫುಲ್ಲ'ಚಂದ್ರ'**

ಕೃಷಿ ಎಂದರೆ ಕಷ್ಟ. ತೋಟದಲ್ಲಿ ಕೆಲಸ ಮಾಡಲು ಆಳುಗಳೇ ಸಿಕ್ಕುವುದಿಲ್ಲ ಎಂದು ಹೇಳುವವರೆ ಹೆಚ್ಚು ಜನ. ಇಂತಹವರ ನಡುವೆ ಇಲ್ಲೊಬ್ಬರು ಕೃಷಿಯಲ್ಲಿ ಹಣ, ಶ್ರಮ, ಸಮಯ ಎಲ್ಲವನ್ನೂ ಕನಿಷ್ಠವಾಗಿ ಬಳಸಿಕೊಂಡು ಗರಿಷ್ಠ ಇಳುವರಿ ಪಡೆಯುವ ಮೂಲಕ ಹೆಚ್ಚಿನ ಆದಾಯ ಪಡೆಯುತ್ತಿದ್ದಾರೆ. ಅವರೇ ಡಿ.ಪಿ. ಸವ್ಯಸಾಚಿ, ಕಬ್ಬಿನಲ್ಲಿ ಕೂಳೆ ಬೆಳೆ ತೆಗೆದು ಹತ್ತಾರು ರಾಷ್ಟ್ರೀಯ ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳನ್ನು ಮುಡಿಗೇರಿಸಿಕೊಂಡ ಡಾ. ದೇವಂಗಿ ಪ್ರಫುಲ್ಲ ಚಂದ್ರ ಅವರ ಸುಪುತ್ರ.

ಸಾಹಿತ್ಯ ಕ್ಷೇತ್ರದಲ್ಲಿ ಕುವೆಂಪು ಅವರಿಗೆ ತೇಜಸ್ವಿ, ಡಿವಿಜಿ ಅವರಿಗೆ ಬಿಜಿಎಲ್ ಸ್ವಾಮಿ, ಕಾರಂತರಿಗೆ ಉಲ್ಲಾಸ್ ಕಾರಂತ ಇದ್ದಂತೆ ಕೃಷಿ ಕ್ಷೇತ್ರದಲ್ಲಿ ಡಾ. ಪ್ರಫುಲ್ಲ ಚಂದ್ರ ಅವರಿಗೆ ಸವ್ಯಸಾಚಿ ತಂದೆಗೆ ತಕ್ಕ ಮಗನಾಗಿ ಈಗ ದೇಶದಲ್ಲಷ್ಟೆ ಅಲ್ಲಾ ವಿದೇಶಗಳಲ್ಲೂ ಗಮನ ಸೆಳೆಯುವಂತೆ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ.

ಒಂದು ಟ್ರ್ಯಾಕ್ಟರ್‌ನಿಂದ ಕಲ್ಪನೆಗೂ ನಿಲುಕದಷ್ಟು ಕೃಷಿ ಕೆಲಸಗಳನ್ನು ಮಾಡುವ ತಂತ್ರಜ್ಞಾನವನ್ನು ಆವಿಷ್ಕಾರ ಮಾಡಿರುವ ಇವರ ಜಾಣ್ಮೆ ಅವರನ್ನು ನೇಗಿಲಯೋಗಿಯ ಬದಲಾಗಿ 'ಟ್ರ್ಯಾಕ್ಟರ್ ಯೋಗಿ' ಎಂದು ಕರೆಯುವಂತೆ ಮಾಡಿದೆ.

ಶಿವಮೊಗ್ಗ–ತೀರ್ಥಹಳ್ಳಿ ರಸ್ತೆಯಲ್ಲಿ ಆರೇಳು ಕಿ.ಮೀ. ಸಾಗಿ ಬಲಕ್ಕೆ ಎರಡು ಕಿ.ಮೀ ಕ್ರಮಿಸಿದರೆ ಡಾ. ದೇವಂಗಿ ಪ್ರಫುಲ್ಲ ಚಂದ್ರ ಅವರ 'ಕೃಷಿಸಂಪದ' ತೋಟ ಸಿಗುತ್ತದೆ. ಕಡಿಮೆ ಶ್ರಮ, ಕನಿಷ್ಠ ಬಂಡವಾಳ ತೊಡಗಿಸಿ ನೈಸರ್ಗಿಕವಾಗಿ ಕೃಷಿ ಮಾಡಬೇಕೆಂಬ ರೈತರಿಗೆ 'ಕೃಷಿಸಂಪದ'ವೊಂದು ಮಾದರಿ ಪ್ರಾತ್ಯಕ್ಷಿಕೆ. ಕಳೆದ ನಾಲ್ಕು ದಶಕಗಳಿಂದ ಇಲ್ಲಿಗೆ ದೇಶ, ವಿದೇಶಗಳ 25 ಸಾವಿರಕ್ಕೂ ಹೆಚ್ಚು ರೈತರು ಭೇಟಿ ನೀಡಿ, 8 ಸಾವಿರ ಗಂಟೆಗಳಿಗೂ ಹೆಚ್ಚು ಸಮಯ ಕೃಷಿ ಪಾಠ ಕೇಳಿಸಿಕೊಂಡಿದ್ದಾರೆ. ಆಶ್ಚರ್ಯ ಎಂದರೆ 'ಕೃಷಿಸಂಪದ'ದಲ್ಲಿ ಈ ವಿವರಗಳನ್ನು ದಾಖಲಿಸಿ ಜೋಪಾನವಾಗಿ ಇಡಲಾಗಿದೆ.

ಮಾಜಿ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್, ರಾಮಕೃಷ್ಣ ಹೆಗಡೆ, ಕೇಂದ್ರ ಮಂತ್ರಿಯಾಗಿದ್ದ ಬಲರಾಮ್ ಜಾಕಡ್, ಗುಜರಾತಿನ ದೊರೆ ಎಂ.ಸಿ.ವೀರೇಂದ್ರಸಿಂಗ್, ನೈಸರ್ಗಿಕ ಕೃಷಿಕ ಸುಭಾಷ್ ಪಾಳೇಕರ್ ಸೇರಿದಂತೆ ಘಾನಾ, ಆಫ್ರಿಕಾ ದೇಶದ ವಿದ್ಯಾರ್ಥಿಗಳು 'ಕೃಷಿಸಂಪದ'ಕ್ಕೆ ಭೇಟಿ ನೀಡಿ ಕೃಷಿ ಸಾಧನೆಯನ್ನು ಕಣ್ತುಂಬಿಕೊಂಡಿದ್ದಾರೆ.

35 ಎಕರೆ ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳಾಗಿ ತೆಂಗು, ಅಡಿಕೆ, ಉಪ ಬೆಳೆಗಳಾಗಿ ಕೋಕೋ, ಬಾಳೆ, ಹಲಸು, ಮಾವು, ಕಾಫಿ, ಇತರೆ ಬೆಳೆಗಳಾಗಿ ಮೆಣಸು, ವೆನಿಲ್ಲಾ, ಸಪೋಟ, ದಾಲ್ಚಿನ್ನಿ ಜೊತೆಗೆ ಅರಣ್ಯ ಕೃಷಿ. ನೀಲಗಿರಿ, ಸರ್ವೆ, ಸಿಲ್ವರ್, ಹೆಬ್ಬೇವು, ತೇಗ ಹೀಗೆ ನಾನಾ ರೀತಿಯ ಸಸ್ಯ, ಮರಗಿಡಗಳು ಹಸಿರಿನಿಂದ ಕಂಗೊಳಿಸುತ್ತಿವೆ.

ಅಪ್ಪ–ಮಕ್ಕಳ ಸಂಶೋಧನೆಗಳನ್ನು ಪಟ್ಟಿ ಮಾಡುವುದು ಕಷ್ಟ. ಒಂದು ಎಕರೆಯಲ್ಲಿ ಒಂದು ಹೆಕ್ಟೇರ್‌ನಲ್ಲಿ ಬೆಳೆಯಬಹುದಾದಷ್ಟು ತೆಂಗು ಬೆಳೆದಿರುವುದು. ಕೂಳೆ ಕಬ್ಬಿನಿಂದ 40 ವರ್ಷ ಅತಿ ಹೆಚ್ಚು ಇಳುವರಿ ತೆಗೆದದ್ದು, ದನದ ಕೊಟ್ಟಿಗೆಗೆ ಹೊಸ ರೂಪ ಕೊಟ್ಟಿರುವುದು, ಗಿಡಗಳಿಗೆ ಸ್ಲರಿಬ್ಲೀಡಿಂಗ್ ಮೂಲಕ ಗೊಬ್ಬರ ಕೊಟ್ಟಿದ್ದು, ಅಡಿಕೆ, ತೆಂಗು ಕೊಯ್ಲು ಮಾಡುವ ತಂತ್ರಜ್ಞಾನ, ಅಡಿಕೆ ಉದುರು ಯಂತ್ರ, ಪಶು ಆಹಾರದಲ್ಲೂ ಪ್ರಯೋಗ, ಅಡಿಕೆ–ತೆಂಗಿನ ನಿರ್ವಹಣೆಯಲ್ಲಿ ಸರಳಯಂತ್ರ, ಅಡಿಕೆ ಬೇಯಿಸಲು ಹೊಸ ತಂತ್ರಜ್ಞಾನ ಕಂಡು ಹಿಡಿದು ಲಕ್ಷಾಂತರ ಎಕರೆ ಕಾಡು ಉಳಿಸಿದ್ದು, ಕೃಷಿ ತ್ಯಾಜ್ಯ ಕೊಳೆಸಿ ಉತ್ಕೃಷ್ಟ ಗೊಬ್ಬರವಾಗಿಸಿದ್ದು, ಶೂನ್ಯ ಕೃಷಿ ಹೀಗೆ ಹಲವಾರು ಸಂಶೋಧನೆಗಳನ್ನು ಮಾಡುವ ಮೂಲಕ ಅದನ್ನು ರೈತರಿಗೆ ಧಾರೆ ಎರೆದಿದ್ದಾರೆ.

ಮಾಧ್ಯಮಗಳಿಂದ 'ಐಡಿಯಲ್ ಮ್ಯಾನ್ ಆಫ್ ಶಿವಮೊಗ್ಗ' ಎಂದು ಕರೆಸಿಕೊಂಡಿದ್ದವರು ಡಾ. ದೇವಂಗಿ ಪ್ರಫುಲ್ಲ ಚಂದ್ರ. ರಾಷ್ಟ್ರಕವಿ ಕುವೆಂಪು ಅವರ ಭಾವಮೈದುನ. ತಮ್ಮ 80ನೇ ವಯಸ್ಸಿನಲ್ಲೂ ಪ್ರತಿ ದಿನಾ ಐದಾರು ಗಂಟೆ ದುಡಿಯುತ್ತಿದ್ದ ಪ್ರಫುಲ್ಲ ಚಂದ್ರ ಈಗ ನಮ್ಮೊಡನಿಲ್ಲ ಆದರೆ ಅವರ ಮಗ ಸವ್ಯಸಾಚಿ ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ಸಾಗುವ ಮೂಲಕ ಯುವ ಕೃಷಿಕರಿಗೆ ಸ್ಫೂರ್ತಿಯ ಚಿಲುಮೆಯಾಗಿ 'ಕೃಷಿಸಂಪದ'ಕ್ಕೆ ಬಂದವರಿಗೆ ಮಾರ್ಗದರ್ಶಕರಾಗಿ ತಂದೆಯ ಪರಂಪರೆಯನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.

2016 ಅಕ್ಟೋಬರ್ ಮೂರನೆ ವಾರದಲ್ಲಿ ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯದಲ್ಲಿ ನಡೆದ ಕೃಷಿಮೇಳಕ್ಕೆ ಭೇಟಿ ನೀಡಿದ್ದ ನಮ್ಮ ಅಧ್ಯಯನ ತಂಡ ಶಿವಮೊಗ್ಗದ ಸನಿಹದಲ್ಲೆ ಇರುವ 'ಕೃಷಿಸಂಪದ'ಕ್ಕೆ ಭೇಟಿ ನೀಡಿ ಸವ್ಯಸಾಚಿಯವರ ಅಭಿರುಚಿ, ಆಸಕ್ತಿ, ಕೃಷಿ ಸಾಧನೆ, ಕೃಷಿಗೆ ಬೇಕಾದ ಯಂತ್ರಗಳ ಆವಿಷ್ಕಾರ ಮತ್ತು ಸ್ಕೀಟ್ ಶೂಟಿಂಗ್ ಎಲ್ಲವನ್ನೂ ಕಣ್ಣಾರೆ ಕಂಡು ಬೆರಗಾಯಿತು.

### ಹಳೆಬೇರು ಹೊಸ ಚಿಗುರು

'1952ರಲ್ಲಿ ಟ್ರ್ಯಾಕ್ಟರ್ ಓಡಿಸುವ ಹುಚ್ಚಿನಿಂದ ಕೃಷಿ ಕ್ಷೇತ್ರಕ್ಕೆ ಬಂದ ನಮ್ಮ ತಂದೆಯವರು 1962ರಲ್ಲಿ ಸಣ್ಣ ಸಣ್ಣ ತಪ್ಪುಗಳಿಂದ ಕಷ್ಟಕ್ಕೆ ಸಿಲುಕಿಕೊಂಡರು. ಅಪ್ಪನಿಂದ ಬಂದ ಎಲ್ಲ ಆಸ್ತಿ ಕಳೆದುಕೊಂಡು ದೈಹಿಕವಾಗಿ, ಮಾನಸಿಕವಾಗಿ ಕುಗ್ಗಿ ಹೋದರು. ಅನಾರೋಗ್ಯಕ್ಕೆ ತುತ್ತಾಗಿ ತಮಿಳುನಾಡಿನ ವೆಲ್ಲೂರು ಆಸ್ಪತ್ರೆ ಸೇರಿಕೊಂಡರು. ಅಲ್ಲಿ ತಮ್ಮ ತಪ್ಪುಗಳ ಅರಿವಾಗಿ ಅಲ್ಲಿಂದ ಆರೋಗ್ಯವಾಗಿ ಕೃಷಿಗೆ ಬಂದವರು ಮತ್ತೆ ಹಿಂತಿರುಗಿ ನೋಡಲಿಲ್ಲ.

ಕೃಷಿಯಿಂದ ನಷ್ಟ ಅನುಭವಿಸಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರು ಇದನ್ನು ಗಮನಿಸಬೇಕು. ಮನಸ್ಸಿದ್ದರೆ ಮಾರ್ಗ ಎನ್ನುವಂತೆ ನಮ್ಮ ತಂದೆ ಕೃಷಿಯಲ್ಲಿ ಸಾಧನೆ ಮಾಡುವ ಮೂಲಕ ಜಗತ್ತು ಅವರ ಕಡೆ ತಿರುಗಿ ನೋಡುವಂತೆ ಮಾಡಿದರು. ತಮ್ಮ ಇಬ್ಬರು ಮಕ್ಕಳಿಗೆ ಅಗ್ರಿಕಲ್ಚರ್‌ನಲ್ಲೇ ಶಿಕ್ಷಣ ಕೊಡಿಸಿ ಪದವೀಧರರನ್ನಾಗಿ ಮಾಡಿ ಕೃಷಿಕರಾಗಿ ಮಾಡಿದ್ದು ನಮ್ಮ ರೈತರಿಗೆ ಆದರ್ಶವಾಗಬೇಕು ಎಂದು ಸವ್ಯಸಾಚಿ ಹೇಳುತ್ತಿದ್ದರೆ ಹೊಲ ಬಿಟ್ಟು ನಗರಗಳಲ್ಲಿ ಕೂಲಿ ಕೆಲಸಕ್ಕೆ ಸೇರಿಕೊಂಡ ಅನ್ನದಾತರ ಮಕ್ಕಳು ನೆನಪಾದರು.

ವೆಲ್ಲೂರಿನ ಆಸ್ಪತ್ರೆಯ ಅನುಭವಗಳನ್ನು ಪ್ರಫುಲ್ಲ ಚಂದ್ರ ಅವರೆ ಒಂದೆಡೆ ಹೀಗೆ ಬರೆದುಕೊಂಡಿದ್ದಾರೆ. "ಅದು ಅಕ್ಷರಶಃ ಮೃತ್ಯುವಿನ ದವಡೆ. ಪ್ರತಿ ದಿನ ಒಂದೊಂದು ಹಾಸಿಗೆ ಖಾಲಿಯಾಗುತ್ತಿತ್ತು. ನಾನು ದಿನ ಎಣಿಸುತ್ತಾ ಗಡ್ಡ ಬಿಟ್ಟುಕೊಂಡು ಕಳೆಗುಂದಿದ್ದೆ. ಆಗ ತಾನೆ ಇಂಗ್ಲೆಂಡಿನಿಂದ ಎಂಆರ್‌ಸಿಪಿ ಮುಗಿಸಿಬಂದಿದ್ದ ಯುವ ವೈದ್ಯ ಡಾ.ಸುಕುಮಾರ

ಎಂಬುವವರು ನಿಮಗೇನಾಗಿದೆ ಮೊದಲು ಗಡ್ಡ ಬೋಳಿಸಿ ಎಂದರು. ಗಡ್ಡ ತೆಗೆದು ನೋಡಿಕೊಂಡಾಗ ಮುಖ ಲವಲವಿಕೆಯಿಂದ ಕಾಣುತ್ತಿತ್ತು, ಹಂತ ಹಂತವಾಗಿ ಚೇತರಿಸಿಕೊಂಡೆ. ಆರೋಗ್ಯವಾಗುತ್ತಿದ್ದಂತೆ ಇದುವರೆಗೂ ಕೃಷಿಯಲ್ಲಿ ನಾನು ಮಾಡಿದ ತಪ್ಪುಗಳ ಬಗ್ಗೆ ಚಿಂತಿಸಿದೆ. ಮತ್ತೆ ಅಂತಹ ತಪ್ಪುಗಳನ್ನು ಮಾಡದಿರಲು ನಿರ್ಧರಿಸಿದೆ. ಅಲ್ಲಿಂದ ಆರಂಭವಾದ ನನ್ನ ಕೃಷಿ ಪ್ರಯೋಗಗಳು ಯಶಸ್ಸಿನ ಮೆಟ್ಟಿಲಾದವು" ಎಂದು ದಾಖಲಿಸಿದ್ದಾರೆ.

ಇಂತಹ ರೈತ ವಿಜ್ಞಾನಿಯ ಕೃಷಿ ಸಾಧನೆಗೆ ರಾಜ್ಯ ಪ್ರಶಸ್ತಿ, ಅರಣ್ಯ ಇಲಾಖೆ ನೀಡುವ ಪರಿಸರ ಪ್ರಶಸ್ತಿ, ಕೃಷಿ ಪಂಡಿತ, 1988ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯವರು ನೀಡುವ 'ವಿಶ್ವ ಆಹಾರ' ಪ್ರಶಸ್ತಿ, 2000ನೆ ಇಸವಿಯಲ್ಲಿ ಅಮೇರಿಕಾ ದೇಶದ ರೈತ ಮಿತ್ರರಿಂದ ಗೌರವ ಪ್ರಶಸ್ತಿ ಹೀಗೆ ನೂರಾರು ಪುರಸ್ಕಾರಗಳು ಸಂದಿವೆ.

ಅವರೊಬ್ಬ ನಿರಂತರ ಪ್ರಯೋಗಶೀಲ ಕೃಷಿಕ. ಕಾಲೇಜು ಮೆಟ್ಟಿಲು ಹತ್ತದಿದ್ದರೂ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆದ ಹೆಮ್ಮೆಯ ಕೃಷಿಕ. ಹತ್ತಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿಗಳು ಸೇರಿದಂತೆ ಕೂಳೆ ಕಬ್ಬಿನ ಬೆಳೆಗೆ ಎಂಟು ಸ್ವರ್ಣ ಪದಕಗಳನ್ನು ಪಡೆದ ಕೃಷಿಪಂಡಿತ.

ಸೆನೆಟ್, ಸಿಂಡಿಕೇಟ್ ಸದಸ್ಯ. ಕಬ್ಬು, ಭತ್ತ, ಅಡಿಕೆ ಅಭಿವೃದ್ಧಿ ಮಂಡಳಿಗೆ ಸದಸ್ಯ. ವೈಲ್ಡ್ ಲೈಫ್ ವಾರ್ಡನ್, ಕೃಷಿ ಉತ್ಪನ್ನಗಳ ದರ ನಿಗಧಿ ಸಮಿತಿ ಸದಸ್ಯ. ಹೀಗೆ ಅವರು ನಿರಂತರವಾಗಿ 40 ವರ್ಷಗಳ ಕಾಲ ಕೃಷಿಯಲ್ಲಿ ಹಲವಾರು ಪ್ರಯೋಗಗಳನ್ನು ಮಾಡುತ್ತಾ ಯಶಸ್ಸು ಕಂಡ ಕೃಷಿಕ.

1966ರಲ್ಲಿ 2, 3 ಎಕರೆ ಪ್ರದೇಶದಲ್ಲಿ ಸಿಓ 740 ಮತ್ತು ಸಿಓ 419 ತಳಿಯ ಕಬ್ಬು ನಾಟಿ ಮಾಡಿ ಸತತವಾಗಿ 40 ವರ್ಷ ದಾಖಲೆ ಇಳುವರಿ. ಅದಕ್ಕಾಗಿ 8 ಸುವರ್ಣ ಪದಕ ಸೇರಿದಂತೆ ಹತ್ತಾರು ಪ್ರಶಸ್ತಿಗಳು ಅರಸಿಬಂದವು. 20 ದೇಶಗಳ ಪ್ರಗತಿಪರ ರೈತರು ಸಮೀಕ್ಷೆ ನಡೆಸಿ ಅಂತರರಾಷ್ಟ್ರೀಯ ಕಬ್ಬು ಬೆಳೆಗಾರ ಪ್ರಶಸ್ತಿ ನೀಡಿದ್ದಾರೆ ಎನ್ನುವುದು ಇಲ್ಲಿ ನಮ್ಮ ನೆನಪಿನಲ್ಲಿರಬೇಕಾದ ಮುಖ್ಯ ವಿಚಾರ.

"ಮಾತ್ರೆಯನ್ನು ನೀರಿನಲ್ಲಿ ಕರಗಿಸಿ ಕುಡಿದರೆ ಶೀಘ್ರ ಪರಿಣಾಮ ಬೀರುತ್ತದೆ ಎಂದು ವೈದ್ಯರು ಹೇಳುತ್ತಿದ್ದರು. ಇದು ಅಲ್ಪಾವಧಿ ಬೆಳೆಗಳಿಗೆ ದ್ರವರೂಪದಲ್ಲಿ ಗೊಬ್ಬರ ಕೊಡಲು ಪ್ರೇರಣೆ ನೀಡಿತು".



"ನಾನು ಬರೀ ರೈತನಾಗಿದ್ದರೆ ಈ ಸ್ಥಿತಿ ತಲುಪುತ್ತಿರಲಿಲ್ಲ. ನಾನೊಬ್ಬ ವ್ಯಾಪಾರಿಯೂ ಆಗಿ ಸಾಧಿಸಿದ್ದು ಬಹಳ" ಎಂದು ತಮ್ಮ ತಂದೆ ಹೇಳುತ್ತಿದ್ದ ಮಾತುಗಳನ್ನು ಸವ್ಯಸಾಚಿ ನೆನಪಿಸಿಕೊಂಡರು.

**ರೈತರಿಗೆ ಸಲಹೆ**

"ಕೃಷಿಸಂಪದ"ವೊಂದು ಕೃಷಿ ತಾಂತ್ರಿಕ ವಿಶ್ವವಿದ್ಯಾನಿಲಯದಂತಿದೆ. ನಿರಂತರ ಶ್ರಮ, ಕೆಲಸದಲ್ಲಿ ಅಚ್ಚುಕಟ್ಟುತನ, ಕಲಿಯುವ ಶ್ರದ್ಧೆ, ವೈಜ್ಞಾನಿಕ ಪದ್ಧತಿಗಳ ಅಳವಡಿಕೆ ಇವೆ ನಮ್ಮ ಯಶಸ್ಸಿನ ಗುಟ್ಟು" ಎನ್ನುತ್ತಾರೆ ಸವ್ಯಸಾಚಿ.

ರೈತರು ತಮ್ಮ ಸುತ್ತ ಮುತ್ತ ಇರುವ ಉತ್ತಮವಾದ ತಾಕುಗಳಿಗೆ ಭೇಟಿ ನೀಡಬೇಕು. ಪ್ರಗತಿಪರ ರೈತರಿಂದ ಕಲಿತುಕೊಂಡು ತಮ್ಮ ಜಮೀನುಗಳಲ್ಲಿ ಅಳವಡಿಸಿಕೊಳ್ಳಬೇಕು. ರೈತರು ಹೋಗಬೇಕಾಗಿರುವುದು ದೇವಸ್ಥಾನಕ್ಕಲ್ಲ ಪ್ರಗತಿಪರ ರೈತರ ತೋಟಗಳಿಗೆ" ಎನ್ನುತ್ತಾರೆ. ಉತ್ಪಾದನೆ, ಸಂಸ್ಕರಣೆ, ಮಾರಾಟ ಜೊತೆಗೆ ಮಾಹಿತಿ ಪ್ರಸಾರ ತುಂಬಾ ಮುಖ್ಯ. ಮುಂದಿನ ಇಪ್ಪತ್ತು ವರ್ಷದ ಯೋಜನೆ ದೂರದೃಷ್ಟಿ ಇದ್ದರೆ ನಿಮ್ಮ ಜಮೀನನ್ನು ನೀವೇ ಬಂಗಾರ ಮಾಡಿಕೊಳ್ಳಬಹುದು.

ದನಕರುಗಳನ್ನು ಕಟ್ಟಿ ಸಾಕುವುದನ್ನು ಕಲಿಯಬೇಕು. ರೈತ ತನ್ನ ತೋಟಕ್ಕೆ ಮಾಲೀಕನಷ್ಟೇ ಅಲ್ಲಾ ತಾನೂ ಒಬ್ಬ ಕೂಲಿ ಎಂದು ತಿಳಿಯಬೇಕು. ಬೇಲಿಯ ಸಾಲಿನಲ್ಲಿ ಹೂ, ಹಣ್ಣು, ಮರಮುಟ್ಟುಗಳನ್ನು ಬೆಳೆಸಿಕೊಳ್ಳಬೇಕು. ಸಾಧ್ಯವಾದಷ್ಟು ಅವು ಪೂರ್ವ ಪಶ್ಚಿಮವಾಗಿರಬೇಕು. ಮುಖ್ಯವಾಗಿ ಜಮೀನಿನಲ್ಲೆ ಮನೇ ಮಾಡಿಕೊಂಡಿರಬೇಕು. ನಾವು ಯಾರಿಗಾಗಿ ಕೃಷಿ ಮಾಡುತ್ತಿದ್ದೇವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ತಾನು ಬದುಕಲು, ತನ್ನ ಸುಖ ಸಂತೋಷಕ್ಕಾಗಿ ಕೃಷಿ ಮಾಡುತ್ತಿದ್ದೇನೆ ಎನ್ನುವುದು ಬಹಳ ಮುಖ್ಯ ಎಂದು ಸವ್ಯಸಾಚಿ ಖಡಕ್ ಆಗಿ ಹೇಳುತ್ತಾರೆ.

ನಮ್ಮ ತಂದೆ ಪ್ರಫುಲ್ಲ ಚಂದ್ರ ಅವರು ಹೇಳುತ್ತಿದ್ದರು "ರೈತರಲ್ಲಿರುವ ಸೋಮಾರಿತನ, ಆಲಸ್ಯ, ಒಡಕು, ಪುಡಿ ರಾಜಕೀಯ ಅವರನ್ನು ಆರ್ಥಿಕವಾಗಿ ಕೆಳಕ್ಕೆ ನೂಕಿದೆ" ಎಂದು.

ಅಧಿಕ ಬೆಳೆದರೆ ಅಧಿಕ ಲಾಸು, ಕಡಿಮೆ ಬೆಳೆದರೆ ಕಡಿಮೆ ಲಾಸು, ಏನೂ ಬೆಳೆಯದಿದ್ದರೆ ಏನೂ ನಷ್ಟವೇ ಇಲ್ಲ ಎಂಬಂತಾಗಿದೆ ರೈತರ ಸ್ಥಿತಿ. ಒಂದು ಕಾಲದಲ್ಲಿ ಜೀವನ ಕ್ರಮವಾಗಿದ್ದ ಕೃಷಿಯನ್ನು ಇಂದು ಒಂದು ಉದ್ಯಮವಾಗಿ ನೋಡುವ ಅಪಾಯಕಾರಿ ಕ್ರಮ ಬೆಳೆಯುತ್ತಿದೆ. ಪರಿಣಾಮ ಸಣ್ಣಪುಟ್ಟ ರೈತರು ಹೊಲಗದ್ದೆ ಮಾರಾಟ ಮಾಡಿ ಕೂಲಿಗಳಾಗುತ್ತಿದ್ದಾರೆ. ಹಣವಂತರು, ಬಂಡವಾಳಶಾಹಿಗಳು ನೂರಾರು ಎಕರೆ ಭೂಮಿ ಖರೀದಿಸಿ ಕೃಷಿಯನ್ನು ಉದ್ಯಮ ಮಾಡಲು ಹೊರಟಿದ್ದಾರೆ. ಇಂತಹ ವಿಚಿತ್ರ ಸನ್ನಿವೇಶದಲ್ಲಿ ಕೃಷಿಯನ್ನು ಸರಳ, ಸಹಜಗೊಳಿಸುವುದು, ಕೃಷಿ ಕಾರ್ಮಿಕರ ದೈಹಿಕ ಶ್ರಮವನ್ನು ಕಡಿಮೆಗೊಳಿಸಿ ಸಣ್ಣ ಹಿಡುವಳಿ ಹೊಂದಿರುವ ರೈತ ಸಮುದಾಯವನ್ನು ಉಳಿಸಿಕೊಳ್ಳಬೇಕಿದೆ. ರೈತರಿಗೆ ಸುಲಭವಾಗಿ ಸಿಗುವಂತೆ ಕೃಷಿ ತಂತ್ರಜ್ಞಾನಗಳನ್ನು ಇವೆರಡರ ಅನುಭವವಿರುವ ರೈತರು ಆವಿಷ್ಕಾರ ಮಾಡಬೇಕು. ಇಂತಹ ಸಾಧನೆಗಳಿಗೆ ಸರ್ಕಾರವೂ ಪ್ರೋತ್ಸಾಹ ನೀಡಬೇಕು ಎಂದು ಸವ್ಯಸಾಚಿ ಹೇಳುತ್ತಾರೆ. ಆಸಕ್ತರು ದೂ.8182272730 ಸಂಪರ್ಕಿಸಬಹುದು. ■

# ಶ್ರೀಗಂಧ (Santalum album)

ಕೃಪೆ: **ಕರ್ನಾಟಕ ಅರಣ್ಯ ಇಲಾಖೆ, ಸಂಶೋಧನೆ ಮತ್ತು ಬಳಕೆ, ದೊರೆಸಾನಿಪಾಳ್ಯ, ಬೆಂಗಳೂರು**

ಕರ್ನಾಟಕದ ರಾಜ್ಯ ವೃಕ್ಷ ಮತ್ತು ಭಾರತ ಉಪಖಂಡದ ಸ್ಥಳೀಯ ವೃಕ್ಷ ಜಾತಿಯಾಗಿರುವ ಶ್ರೀಗಂಧವು ಉಷ್ಣವಲಯದಲ್ಲಿ ಬೆಳೆಯುವ ಸುಗಂಧಭರಿತವಾದ ಮಧ್ಯಮ ಗಾತ್ರದ ಮರ. ಉತ್ತಮ ಬೆಳವಣಿಗೆ ಹೊಂದಿದ ಮರವು 1.5ಮೀಗೂ ಹೆಚ್ಚಿನ ಸುತ್ತಳತೆಯನ್ನು ಹೊಂದಿರಬಹುದು. ಶ್ರೀಗಂಧವು ಪ್ರಾರಂಭಿಕ ಹಂತದಲ್ಲಿ ಮತ್ತೊಂದು ಸಸಿ ಅಥವಾ ಮರದ ಬೇರಿನಿಂದ ಆಹಾರವನ್ನು ಹೀರಿಕೊಂಡು ಬೆಳೆಯುವ ಅರೆ ಪರಾವಲಂಬಿ ಸಸ್ಯವಾಗಿದ್ದು, ಇದರ ಬೆಳವಣಿಗೆಗೆ ಹೆಚ್ಚಿನ ಬೆಳಕು ಅಗತ್ಯವಾಗಿರುತ್ತದೆ. ಶ್ರೀಗಂಧದ ಮರವು ಬಹುತೇಕ ಎಲ್ಲ ರೀತಿಯ ಮಣ್ಣಿನಲ್ಲಿ, ಒಣಭೂಮಿ ಹಾಗೂ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲೂ ಬೆಳೆಯುತ್ತದೆ. ಎಳೆಯ ಮರವನ್ನು ಕಡಿದಾಗ ಮತ್ತೆ ಚಿಗುರುತ್ತದೆ. ಬೇರುಗಳನ್ನು ತುಂಡು ಅಥವಾ ಗಾಯ ಮಾಡಿದಾಗ ಸಸಿಮರಿಗಳು (Root Suckers) ಬೆಳೆಯುತ್ತವೆ. ಇದು ಸಾಮಾನ್ಯವಾದ ಬೇಸಿಗೆಯನ್ನು ತಡೆದುಕೊಳ್ಳುತ್ತದೆ. ಈ ಮರದ ಸೊಪ್ಪು ಆಡು, ಕುರಿ, ಜಾನುವಾರುಗಳಿಗೆ ತುಂಬಾ ಇಷ್ಟವಾಗಿದ್ದು, ದಂಟನ್ನೂ ಸಹ ಅವುಗಳು ತಿನ್ನುತ್ತವೆ. ಈ ಮರದ ಒಳ ಚೇಗು ಸುವಾಸನಾಭರಿತ ಶ್ರೀಗಂಧವಾಗಿದೆ.

**ಉಪಯೋಗಗಳು:** ಶ್ರೀಗಂಧವನ್ನು ಔಷಧಿಗಳಲ್ಲಿ, ಧಾರ್ಮಿಕ ಕಾರ್ಯಗಳಿಗೆ, ಸುಗಂಧ ದ್ರವ್ಯಗಳ ಮತ್ತು ಸೌಂದರ್ಯ ಪ್ರಸಾದನಗಳ ತಯಾರಿಕೆಯಲ್ಲಿ, ಸಾಬೂನು ಹಾಗೂ ಊದುಬತ್ತಿ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಶ್ರೀಗಂಧ ಮರದ ಒಳತಿರುಳಿನ ಭಾಗವು (Heart wood) ಕೆತ್ತನೆಗೆ ಯೋಗ್ಯವಾಗಿದ್ದು ದೇವರ ಮೂರ್ತಿಗಳ ಮತ್ತು ಇತರ ಕೆತ್ತನೆಗೆ ಉಪಯೋಗಿಸಲ್ಪಡುತ್ತದೆ. ಶ್ರೀಗಂಧ ಮರದ ತಿರುಳು ಹಾಗೂ ಬೇರಿನಿಂದ ತಯಾರಿಸಿದ ಶ್ರೀಗಂಧದ ಎಣ್ಣೆ ಶ್ರೇಷ್ಠ ಗುಣಮಟ್ಟದ್ದಾಗಿದ್ದು ವಿಶ್ವದಾದ್ಯಂತ ಬೇಡಿಕೆ ಪಡೆದಿದೆ.

**ಪ್ರಸ್ತುತ ಶ್ರೀಗಂಧದ ಮರಗಳ ಕುರಿತಂತೆ ಇರುವ ಕಾಯ್ದೆ ಮತ್ತು ನಿಯಮ:**

ಈ ಹಿಂದೆ ಶ್ರೀಗಂಧದ ಮರವು ಎಲ್ಲೇ ಬೆಳೆದಿದ್ದರೂ ಅದು ಸರ್ಕಾರಿ ಸ್ವತ್ತಾಗಿತ್ತು. ಕರ್ನಾಟಕ ಸರ್ಕಾರವು 2001ರಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮಾವಳಿ 1969ಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಶ್ರೀಗಂಧದ ಮರದ ಮಾಲೀಕತ್ವವನ್ನು ಅದನ್ನು ಬೆಳೆದ ಮಾಲೀಕರಿಗೆ ನೀಡಿತು. ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮ 108ಕ್ಕೆ ತಿದ್ದುಪಡಿಯನ್ನು ಮಾಡಲಾಗಿದ್ದು, ಮಾಲೀಕರು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿಗಳಿಗೆ ಅಗತ್ಯ ದಾಖಲೆಗಳೊಂದಿಗೆ ಮರ ಕಟಾವಣೆಗೆ ಅರ್ಜಿ ಸಲ್ಲಿಸಿ ಅನುಮತಿ ಹಾಗೂ ರಹದಾರಿ ಪಡೆದು ಅರಣ್ಯ ಇಲಾಖೆಗಾಗಲಿ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಕಾರ್ಖಾನೆ ಅಥವಾ ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮಕ್ಕಾಗಲಿ ನೇರವಾಗಿ ಮಾರಾಟ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಸಾರ್ವಜನಿಕರು ಅರ್ಜಿ ಸಲ್ಲಿಸಿದ ನಂತರ ಕಾಲಮಿತಿಯಲ್ಲಿ ಅರ್ಜಿಗಳನ್ನು ಆಯಾ ಅಧಿಕಾರಿಗಳು ತೀರುವಳಿಗೊಳಿಸಲು ನಿಯಮದಲ್ಲೇ ನಿಗದಿಗೊಳಿಸಿರುವುದರಿಂದ ಅರ್ಜಿಗಳು ನಿಗದಿತ ಸಮಯದಲ್ಲಿ ಇತ್ಯರ್ಥಗೊಳ್ಳಬೇಕಾಗುತ್ತದೆ. ಶ್ರೀಗಂಧದ ಮಾಲೀಕರಿಂದ ಮರಗಳಿಗೆ ಹಣ ನೀಡಲು ಸರ್ಕಾರ ಆಗಿಂದಾಗ್ಗೆ ಬೆಲೆ ನಿಗದಿಗೊಳಿಸುತ್ತದೆ. ಖರ್ಚು ಕಳೆದು, ಸರ್ಕಾರ ನಿಗದಿಗೊಳಿಸಿದ ಬೆಲೆಯನ್ನೇ ಮಾಲೀಕರಿಗೆ ನೀಡಲಾಗುತ್ತದೆ.

**ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸುವ ವಿಧಾನ:**

ಹತ್ತು ವರ್ಷ ಮೇಲ್ಪಟ್ಟ ಉತ್ತಮ ಮರಗಳಿಂದ ಬೀಜಗಳನ್ನು ಶೇಖರಣೆ ಮಾಡಬೇಕು. ಸಾಮಾನ್ಯವಾಗಿ ಜುಲೈ ಹಾಗೂ ಅಕ್ಟೋಬರ್ ತಿಂಗಳಿನಲ್ಲಿ ಮರಗಳು ಹಣ್ಣುಗಳನ್ನು ಬಿಡುತ್ತವೆ. ಕಳಿತ ಕಂದು ಬಣ್ಣದ ಹಣ್ಣುಗಳನ್ನು ಮತ್ತು ಬುಡದಲ್ಲಿ ಬಿದ್ದಿರುವ ಬೀಜಗಳನ್ನು ಶೇಖರಣೆ ಮಾಡಿ, ನೀರಿನಲ್ಲಿ ನೆನೆಸಿ ಹೊರಗಿನ ಸಿಪ್ಪೆಯನ್ನು ತೆಗೆದು, ನೆರಳಿನಲ್ಲಿ ಒಣಗಿಸಬೇಕು. ಇಂತಹ ಬೀಜಗಳನ್ನು ಶೇಕಡ 0.05ರಷ್ಟು ಜಿಬ್ರೆಲಿಕ್ ದ್ರಾವಣದಲ್ಲಿ ಒಂದು ರಾತ್ರಿ ನೆನೆಸಿ ತೆಗೆಯುವುದರಿಂದ ಅವುಗಳು ಸಮಾನಾಂತರವಾಗಿ ಮೊಳಕೆಯೊಡೆಯುತ್ತವೆ. ಸಾಮಾನ್ಯವಾಗಿ ಒಂದು ಕೆ.ಜಿ.ಯಲ್ಲಿ 5000ದ ವರೆಗೆ ಬೀಜಗಳಿರುತ್ತವೆ. ಇವುಗಳಲ್ಲಿ ಶೇಕಡ 70 ರಿಂದ 80 ರಷ್ಟು ಬೀಜಗಳು ಮೊಳಕೆಯೊಡೆಯುತ್ತವೆ. ಬೀಜಗಳನ್ನು 12 ಮೀ X 1.2 ಮೀ ಅಳತೆಯ ಎತ್ತರಿಸಿದ ಮಡಿಗಳಲ್ಲಿ ಜರಡಿ ಹಿಡಿದು ಮರಳು ಮತ್ತು ಕೆಂಪು ಮಣ್ಣನ್ನು 2:1ರ ಅನುಪಾತದಲ್ಲಿ ಬೆರಸಿ ಸಮವಾಗಿ ಹರಡಬೇಕು. ಬೀಜಗಳನ್ನು ಸಮಾನಾಂತರವಾಗಿ ಹರಡಿ ಅದರ ಮೇಲೆ 1/2 ಅಂಗುಲ ಮರಳನ್ನು ಹರಡಿ ಬೀಜಗಳನ್ನು ಮುಚ್ಚಬೇಕು. ಪ್ರತಿ ದಿನ ಎರಡು ಬಾರಿ ನೀರನ್ನು ಕೊಡಬೇಕು. ಮಡಿಗಳಿಗೆ ಸೋಂಕು ರೋಗ ಹಾಗೂ ಕ್ರಿಮಿಕೀಟಗಳ ಬಾಧೆಯನ್ನು ತಡೆಯಲು 0.15% ಡಯಾಥೀನ್ ಮತ್ತು ಎಕಲೆಕ್ಸ್‌ಅನ್ನು 15 ದಿನಗಳಿಗೊಮ್ಮೆ ಸಿಂಪಡಿಸಬೇಕು. 4 ರಿಂದ 6 ವಾರಗಳಲ್ಲಿ ಬೀಜಗಳು ಮೊಳಕೆಯೊಡೆಯುತ್ತವೆ. 2 ರಿಂದ 4 ಎಲೆಗಳಿರುವಾಗ ಗಿಡಗಳನ್ನು 5"X 8" ಅಳತೆಯ ಪ್ಲಾಸ್ಟಿಕ್ ಚೀಲಗಳಲ್ಲಿ 40:15:50ರ ಅನುಪಾತದಲ್ಲಿ ಮಣ್ಣು, ಮರಳು ಮತ್ತು ಸಾವಯವ ಗೊಬ್ಬರವನ್ನು ಹಾಕಿ ನೆಡಬೇಕು. 2 ವಾರಗಳ ನಂತರ ಪ್ರಾಥಮಿಕ ಆಧಾರ ಸಸ್ಯವಾದ ತೊಗರಿಯನ್ನು ಹಾಕುವುದರಿಂದ ಸಸಿಗಳ ಬೆಳವಣಿಗೆಗೆ ವೇಗ ಹೆಚ್ಚಾಗುತ್ತದೆ. ತೊಗರಿಯ ಬದಲು ಹೊನಗೊನೆ ಸೊಪ್ಪನ್ನು ಸಹ ಉಪಯೋಗಿಸಲಾಗುತ್ತಿದೆ. ಶಿಲೀಂಧ್ರ ಮತ್ತು ಕ್ರಿಮಿಕೀಟಗಳಿಂದ ರಕ್ಷಿಸಲು ಬೆವಿಸ್ಟಿನ್ ಮತ್ತು ಎಕಲೆಕ್ಸ್ ಮಿಶ್ರಣವನ್ನು ನಿಗದಿತವಾಗಿ ಸಿಂಪಡಿಸಬೇಕು. ಈ ರೀತಿ ಬೆಳೆಸಿದ ಗಿಡಗಳು ಆರು ತಿಂಗಳ ನಂತರ ನಾಟಿ ಮಾಡಲು ಯೋಗ್ಯವಾಗಿರುತ್ತವೆ. 8"X 12"ಚೀಲದಲ್ಲಿ ಸಸಿಗಳನ್ನು 8 ತಿಂಗಳ ಕಾಲ ಪೋಷಿಸಿ ನಂತರ ನೆಡುತೋಪಿನಲ್ಲಿ ಬೆಳೆಸಿದಲ್ಲಿ ಉತ್ತಮ ಬೆಳವಣಿಗೆ ಕಾಣಬಹುದಾಗಿರುತ್ತದೆ.

**ಮುಖ್ಯವಾದ ರೋಗಗಳು ಮತ್ತು ಅವುಗಳ ಹತೋಟಿ ಕ್ರಮಗಳು:**

| ರೋಗಗಳು | ಲಕ್ಷಣಗಳು | ಹತೋಟಿ ಕ್ರಮಗಳು |
|---|---|---|
| ಎಲೆಚುಕ್ಕಿ ಮತ್ತು ತುಕ್ಕು ರೋಗ | ಎಲೆ ಮೇಲೆ ಕಪ್ಪನೆಯ ವೃತ್ತಾಕಾರದ ಚುಕ್ಕೆಗಳು | 1 ಲೀಟರ್ ನೀರಿಗೆ 2.5 ಗ್ರಾಂ. ಡೈಥೇನ್ ಎಂ.45 ಮಿಶ್ರಣ ಮಾಡಿ ಸಿಂಪಡಿಸಬೇಕು |
| ಕಾಂಡ ಕೊಳೆ ರೋಗ | ಎಲೆಯು ಹಳದಿ ಬಣ್ಣಕ್ಕೆ ತಿರುಗಿ ಉದುರಿ ಹೋಗುವುದು | 0.50 ಪ್ರಮಾಣದಲ್ಲಿ ಬಾವಿಸ್ಟಿನ್‌ನಿಂದ ಸಸಿಗಳನ್ನು ನೆನೆಸಿ ನಾಟಿ ಮಾಡುವುದು |
| ಬೇರು ಕೊಳೆ ರೋಗ | ಬೇರು ಹಾಗೂ ಕಾಂಡ ಕೊಳೆಯುವುದು | 0.25ರಷ್ಟು ಕಾಪರ್ ಆಕ್ಸಿಕ್ಲೋರೈಡ್ ದ್ರಾವಣವನ್ನು ಸಿಂಪಡಿಸಬೇಕು |

ರೈತರು ಬೀಜಗಳಿಂದ ಸಸಿಗಳನ್ನು ಬೆಳಸಿಕೊಳ್ಳಬಹುದಾದರೂ, ಅರಣ್ಯ ಇಲಾಖೆ ಬೆಳೆಸಿದ ಸಿದ್ಧ ಸಸಿಗಳನ್ನು ಸರಕಾರ ನಿಗದಿಗೊಳಿಸಿದ ರಿಯಾಯಿತಿ ದರದಲ್ಲಿ (Subsidised rate) ಪಡೆಯಬಹುದಾಗಿರುತ್ತದೆ.

ಸರಕಾರ ಪ್ರಸ್ತುತ 5"x8" ಹಾಗೂ 6"x9" ಆಳತೆಯ ಸಸಿಗಳಿಗೆ ರೂ. 1/– ಮತ್ತು 8"x12" ಅಳತೆಯ ಪಾಲಿಥೀನ್ ಚೀಲದಲ್ಲಿ ಬೆಳೆಸಿದ ಸಸಿಗಳಿಗೆ ರೂ. 3/– ಬೆಲೆಯನ್ನು ನಿಗದಿ ಪಡಿಸಿದೆ. ರೈತರು ತಮ್ಮ ಜಮೀನಿನಲ್ಲಿ ಮರಗಿಡಗಳನ್ನು ಬೆಳೆಸಲು ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯನ್ನು ಜಾರಿಗೆ ತಂದಿದೆ. ಇದರಿಂದಾಗಿ ಪ್ರಸ್ತುತ ಶ್ರೀಗಂಧದ ಗಿಡಗಳನ್ನು ಬೆಳೆಸಿದ ರೈತರಿಗೆ, ಪ್ರತಿ ಹೆಕ್ಟೇರಿಗೆ 400 ಗಿಡಗಳಿಗೆ ಒಳಪಟ್ಟು, ಮೂರು ವರ್ಷಗಳಲ್ಲಿ ಬದುಕುಳಿದ ಪ್ರತಿ ಗಿಡಕ್ಕೆ ಹಂತ ಹಂತವಾಗಿ ರೂ. 125/– ರಂತೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಸಸಿಗಳಿಗೆ ಹಾಗೂ ಹೆಚ್ಚಿನ ಮಾಹಿತಿಗೆ ಸ್ಥಳೀಯ ವಲಯ ಅರಣ್ಯ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

**ಶೀಗಂಧ ಕೃಷಿ ವಿಧಾನ:**

ಮರಳು ಮಿಶ್ರಿತ ಕೆಂಪು ಮಣ್ಣು ಅತ್ಯುತ್ತಮವಾದರೂ, 5.5–8.5 ಪಿಹೆಚ್ ಇರುವ ಎಲ್ಲಾ ತರಹದ ಮಣ್ಣಿನಲ್ಲೂ ಶ್ರೀಗಂಧ ಕೃಷಿ ಮಾಡಬಹುದು. ಕಪ್ಪು ಮಣ್ಣು (ಮರಳು ಮಿಶ್ರಿತವಲ್ಲದ) ಮತ್ತು ಆಮ್ಲ ಕಡಿಮೆ ಇರುವ (ಚೌಳುಭೂಮಿ) ಮಣ್ಣಿನಲ್ಲಿ ಶ್ರೀಗಂಧ ಬೆಳೆಸಲು ಸಾಧ್ಯವಿಲ್ಲ.

ಚೆನ್ನಾಗಿ ಉಳುಮೆ ಮಾಡಿ ಹದಗೊಳಿಸಿದ ಭೂಮಿಯಲ್ಲಿ 6ಮೀx 6ಮೀ ಅಂತರದಲ್ಲಿ 0.6x 0.6x0.6 ಮೀ ಅಳತೆಯ ಗುಂಡಿ ತೆಗೆದು, ಒಂದು ವಾರ ಒಣಗಿಸಿ (ಕನಿಷ್ಠ 2–3 ದಿನ) ಪ್ರತಿ ಗುಂಡಿಗೆ ಅರ್ಧ ಕೆ.ಜಿ ಬೇವಿನ ಹಿಂಡಿ, 10 ರಿಂದ 15 ಕೆ.ಜಿ. ಕೊಟ್ಟಿಗೆ ಗೊಬ್ಬರ ಜೊತೆಗೆ 20 ಗ್ರಾಂ ಕಾರ್ಬೋಪ್ಯುರಾನ್ (ಪ್ಯುರಡಾನ್), 10–15 ಗ್ರಾಂ ಪೋರೇಟ್ (ಥಿಮೆಡ್) ಮತ್ತು 15–20 ಗ್ರಾಂ ಶಿಲೀಂಧ್ರನಾಶಕ (ಬೆವೆಸ್ಟಿನ್) ಹಾಕಿ ಚೆನ್ನಾಗಿ ನೀರು ಹಾಕಬೇಕು.

ಪಾಲಿಥೀನ್ ಚೀಲವನ್ನು ಸಂಪೂರ್ಣವಾಗಿ ಹರಿದು ಮಣ್ಣು ಉದುರದ ಹಾಗೆ ನೋಡಿಕೊಂಡು ಗಿಡವನ್ನು ಮಣ್ಣಿನ ಸಮೇತ ಮೇಲೆ ತಿಳಿಸಿದಂತೆ ಮಿಶ್ರಣವನ್ನು ತುಂಬಿಸಿದ ಗುಂಡಿಯ ಮಧ್ಯದಲ್ಲಿಟ್ಟು ನಾಟಿ ಮಾಡಬೇಕು. ನಂತರ ನೀರನ್ನು ಕೊಡಬೇಕು. ನಾಟಿ ಮಾಡಿದ ಎರಡು ವಾರದ ನಂತರ ಪ್ರತಿ ಲೀಟರ್ ನೀರಿಗೆ 6 ಗ್ರಾಂ ಎಮಿಸನ್ ಬೆರೆಸಿ ಬುಡಕ್ಕೆ ಕೊಡಬೇಕು. ಶ್ರೀಗಂಧದ ಗಿಡಗಳ ಜೊತೆಗೆ ಇತರ ಬೆಳೆಗಳಾದ ಹೆಬ್ಬೇವು (Melia dubia), ಸಿಲ್ವರ್ ಓಕ್ (Grewelia robusta), ಮಹಾಗನಿ (Switenia mahogany), ಗಾಳಿಮರ (Casuarina equisetifolia), ನೆಲ್ಲಿ (Emblica officinalis), ಗೋಡಂಬಿ (Anacardium occidentale), ನುಗ್ಗೆ (Moringa oleifera), ಸೀಬೆ (Psidium guajava), ಸೀತಾಫಲ (Annona squamosa), ಮುಂತಾದವುಗಳನ್ನು ಅಂತರ ಬೆಳೆಯಾಗಿ ಬೆಳೆದು ಮಧ್ಯಂತರ ಆದಾಯ ಗಳಿಸಬಹುದಾಗಿರುತ್ತದೆ.

ಪ್ರಾರಂಭಿಕ 3–4 ವರ್ಷಗಳವರೆಗೆ ಕೃಷಿ ಬೆಳೆಯನ್ನು ಅಂತರ ಬೆಳೆಯಾಗಿ ಬೆಳೆಯುವುದಾದಲ್ಲಿ, ಒಂದು ಹೆಕ್ಟೇರ್ ಪ್ರದೇಶದಲ್ಲಿ ನೆಡಲು 277 ಶ್ರೀಗಂಧದ ಸಸಿಗಳು ಬೇಕಾಗುತ್ತದೆ. ಒಂದು ವೇಳೆ ಇತರ ಅರಣ್ಯ, ತೋಟಗಾರಿಕಾ ಹಣ್ಣು ಬೆಳೆಗಳನ್ನು ಬೆಳೆದಲ್ಲಿ ಆಯಾ ಮರ ಜಾತಿಗಳ ಹಂದರಕ್ಕೆ ತಕ್ಕಂತೆ ಗಿಡಗಳ ಮಧ್ಯೆ ಅಂತರವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಶ್ರೀಗಂಧದ ಬೆಳೆಯು ದೀರ್ಘಕಾಲದ ನಂತರ ಆದಾಯ ನೀಡುವ ಬೆಳೆಯಾದ್ದರಿಂದ ಶ್ರೀಗಂಧದ ಬೆಳೆಗಾರರು ಶ್ರೀಗಂಧದ ನಡುವೆ ವಾರ್ಷಿಕ ಆದಾಯ ನೀಡುವಂತಹ ಇತರ ಹಣ್ಣಿನ ಬೆಳೆಗಳನ್ನು ಬೆಳೆಯುವುದು ಹೆಚ್ಚು ಸೂಕ್ತವಾಗಿರುತ್ತದೆ.

**ನೆಡುತೋಪಿನ ನಿರ್ವಹಣೆ:**

ಹನಿ ನೀರಾವರಿ ಮೂಲಕ ಬೇಸಿಗೆಯಲ್ಲಿ ನೀರು ಹಾಯಿಸಿ, ವರ್ಷಕ್ಕೊಮ್ಮೆ ಸಸಿಗಳ ಸುತ್ತ ಬೆಳೆದಿರುವ ಕಳೆಯನ್ನು ತೆಗೆದು ಮಣ್ಣು ಅಗತೆ ಮಾಡಿದಲ್ಲಿ, ಗಿಡಗಳು ಉತ್ತಮವಾಗಿ ಬೆಳೆಯುತ್ತವೆ. ಈ ಕೆಳಗಿನಂತೆ ರಸಗೊಬ್ಬರವನ್ನು ಘನ ರೂಪದಲ್ಲಿ ಅಥವಾ ನೀರಿನಲ್ಲಿ ಬೆರೆಸಿ ಗಿಡದ ಸುತ್ತ ನೀಡಬಹುದಾಗಿರುತ್ತದೆ.

**ಶ್ರೀಗಂಧದ ಬೆಳವಣಿಗೆ ಹಾಗೂ ಇಳುವರಿ:**

| ಕ್ರ.ಸಂ. | ರಸಗೊಬ್ಬರ ನೀಡುವ ಸಮಯ (ಸಸಿ ನಾಟಿ ನಂತರ) | ಎನ್.ಪಿ.ಕೆ ಪ್ರಮಾಣ |
|---|---|---|
| 1 | 6 ತಿಂಗಳ ನಂತರ | 50 ಗ್ರಾಂ. |
| 2 | 12 ತಿಂಗಳ ನಂತರ/ವರ್ಷಕ್ಕೆ | 100 ಗ್ರಾಂ. |
| 3 | 18 ತಿಂಗಳಿಗೆ | 150 ಗ್ರಾಂ. |
| 4 | 24 ತಿಂಗಳು/2 ವರ್ಷಕ್ಕೆ | 200 ಗ್ರಾಂ. |
| 5 | 30 ತಿಂಗಳಿಗೆ | 200 ಗ್ರಾಂ. |
| 6 | 36 ತಿಂಗಳಿಗೆ/ವರ್ಷಕ್ಕೆ | 250 ಗ್ರಾಂ. |

ಆಧಾರ: ಶ್ರೀಗಂಧದ ಕೈಪಿಡಿ, ಮರವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು

ಕೃಷಿಕರ ಜಮೀನಿನಲ್ಲಿ ಬೆಳೆದ ಶ್ರೀಗಂಧದ ಮರಗಳ ಅಂಕಿ ಅಂಶವನ್ನು ಆಧರಿಸಿ ಇಳುವರಿಯನ್ನು ಅಂದಾಜಿಸಬಹುದಾಗಿರುತ್ತದೆ. ಶ್ರೀಗಂಧದ ಮರಗಳನ್ನು ಹೆಚ್ಚು ವರ್ಷಗಳ ಕಾಲ ಉತ್ತಮ ರೀತಿಯಲ್ಲಿ ಪೋಷಿಸಿ ನಿರ್ವಹಣೆ ಮಾಡಿದಲ್ಲಿ ಇಳುವರಿಯು ಹೆಚ್ಚಾಗುತ್ತಾ ಹೋಗುತ್ತದೆ. ಸೂಕ್ತ ಹವಾಮಾನ, ಉತ್ತಮ ಮಣ್ಣಿನ ಗುಣಮಟ್ಟ ಹಾಗೂ ಸಮರ್ಪಕವಾಗಿ ನಿರ್ವಹಣೆ ಮಾಡಿದ ಶ್ರೀಗಂಧದ ನೆಡುತೋಪಿನಲ್ಲಿ (ಪ್ರಾಥಮಿಕ 6–7 ವರ್ಷ ಹಾಗೂ ಬರಗಾಲದ ಅವಧಿಯಲ್ಲಿ ಹನಿ ನೀರಾವರಿ ವ್ಯವಸ್ಥೆ ಮಾಡಿದ) ಶ್ರೀಗಂಧದ ಬೆಳೆಗಾರರು ಸಾಮಾನ್ಯವಾಗಿ 15 ವರ್ಷದಿಂದ ಶ್ರೀಗಂಧದ ಮರಗಳನ್ನು ಕಟಾವು ಮಾಡಲು ಇಚ್ಚಿಸಿರುವುದು ಕಂಡು ಬರುತ್ತದೆ. ಇಂತಹ ಸಂದರ್ಭಲ್ಲಿ ಬೆಳೆದ ಎಲ್ಲಾ ಮರವನ್ನು ಒಮ್ಮೆಲೇ ಕಟಾವು ಮಾಡದೆ, ಹಂತ ಹಂತವಾಗಿ 0.45 ಮೀ. ಗಿಂತ ಹೆಚ್ಚಿಗೆ ಸುತ್ತಳತೆ ಹೊಂದಿದ, ಚೇಗಿನಲ್ಲಿ ಶ್ರೀಗಂಧದ ಶೇಖರಣೆಯನ್ನು ಪರಿಶೀಲಿಸಿಕೊಂಡು, ಉತ್ತಮ ಶ್ರೀಗಂಧದ ಶೇಖರಣೆಯನ್ನು ಹೊಂದಿದ ಮರಗಳನ್ನು ಮಾತ್ರ 25 ವರ್ಷಗಳವರೆಗೆ ಕಟಾವು ಮಾಡಿದಲ್ಲಿ, ಒಂದು ಶ್ರೀಗಂಧದ ಮರದಿಂದ 3 ರಿಂದ 8 ಕೆ.ಜಿ. ವರೆಗೆ ಉತ್ತಮ ಗುಣಮಟ್ಟದ ಶ್ರೀಗಂಧವನ್ನು ಪಡೆಯಬಹುದೆಂದು ಅಂದಾಜಿಸಲಾಗಿದೆ (ಬೇರುಗಳನ್ನು ಸೇರಿಸಿ). ಈ ಇಳುವರಿ ಹಾಗೂ ಶ್ರೀಗಂಧದ ಗುಣಮಟ್ಟ ಆಯಾ ಪ್ರದೇಶದ ಹವಾಮಾನ, ಮಣ್ಣಿನ ಗುಣಲಕ್ಷಣ ಮತ್ತು ನಿರ್ವಹಣೆಯ ಗುಣಮಟ್ಟದ ಮೇಲೆ ವ್ಯತ್ಯಾಸವಾಗುವ ಸಾಧ್ಯತೆಗಳಿರುತ್ತವೆ. ಪ್ರಸ್ತುತ ಸರಕಾರ ಪ್ರತಿ ಕೆ.ಜಿ. ಉತ್ತಮ ಗುಣಮಟ್ಟದ ಚೇಗು ಹೊಂದಿರುವ ಶ್ರೀಗಂಧಕ್ಕೆ ರೂ. 10,000 (ಅಂದಾಜು) ದರ ನಿಗದಿಗೊಳಿಸಿರುತ್ತದೆ. ಈ ಎಲ್ಲಾ ಮಾಹಿತಿಯು ಪ್ರಸ್ತುತ ಲಭ್ಯವಿರುವ ಜ್ಞಾನಕ್ಕೆ ಸೀಮಿತವಾಗಿದೆ ಹಾಗೂ ಪರಿಷ್ಕರಣೆಗೆ ಮುಕ್ತವಾಗಿದೆ.

**ಶ್ರೀಗಂಧದ ಕೃಷಿಯಲ್ಲಿ ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳು:**

- ಗಿಡ ನಾಟಿ ಮಾಡಿದ 15 ದಿನದೊಳಗೆ ಒಂದು ಅತಿಥೇಯ (host) ಸಸಿಯನ್ನು ಗಂಧದ ಗಿಡದ ಒಂದೂವರೆ ಅಡಿ ದೂರದಲ್ಲಿ ನೆಡಬೇಕು.
- ಅತಿಥೇಯ ಗಿಡವು, ತೊಗರಿ, ಅಗಸೆ, ನುಗ್ಗೆಕಾಯಿ ಅಥವಾ ಸರ್ವೆ ಗಿಡವಾಗಿದ್ದರೆ ಉತ್ತಮ.
- ರೋಸ್‌ವುಡ್, ರಕ್ತಚಂದನ, ಹೆಬ್ಬೇವು ಮತ್ತು ನೆಲ್ಲಿ ಮರಗಳನ್ನು ಸಹಾ ಅತಿಥೇಯ ಗಿಡಗಳಾಗಿ ನೆಡಬಹುದು.
- ನಾಟಿ ಮಾಡಿದ ನಂತರ ತಮ್ಮ ಜಮೀನಿನ ಪಹಣಿಯ ಬೆಳೆ ಕಾಲಂನಲ್ಲಿ ಶ್ರೀಗಂಧದ ಬೇಸಾಯ/ಕೃಷಿ ಎಂದು ಗ್ರಾಮ ಲೆಕ್ಕಿಗರಿಗೆ ಮಾಹಿತಿ ಒದಗಿಸಿ ಬರೆಸುವುದು.
- ಶ್ರೀಗಂಧದ ಮರಗಳ ರಕ್ಷಣೆಗೆ ಮುಂದಾಲೋಚನೆಯೊಂದಿಗೆ ರಕ್ಷಣಾತ್ಮಕ ಕ್ರಮ ವಹಿಸಬೇಕಾಗುತ್ತದೆ. ■

# ಬಿದಿರು ಎಂಬ ಬೆರಗು...

✍ **ಸತೀಶ್ ಜಿ.ಕೆ. ತೀರ್ಥಹಳ್ಳಿ,** MSc,MEd,MPhil. ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು ಹೆಬ್ರಿ, ಉಡುಪಿ ಜಿಲ್ಲೆ. ಮೊ.94488 27582

ಅಮ್ಮನೊಟ್ಟಿಗೆ ಕಟ್ಟಿಗೆಗಂತ ಕಾಡಿಗೆ ಹೋದ ಗುಂಡ ಹಿಂತಿರುಗಿ ಬರುವಾಗ ತಲೆಯ ಮೇಲೊಂದು ಸೌದೆ ಹೊರೆ ಮತ್ತು ಜೇಬು ತುಂಬ ಬಿದಿರಕ್ಕಿಯನ್ನು ತುಂಬಿಕೊಂಡು ಬಂದಿದ್ದ. ಬಂದವನೇ ಶುಂಠಿಹಕ್ಕಲಿನ ಬೇಲಿ ಬದೀಲಿ ಪಾತಿಮಾಡಿ ಬಿದಿರು ಬೀಜಗಳನ್ನು ಬಿತ್ತಿ, ನೀರೆರೆದ.. ಬೆಳಗು-ಬೈಗು ಕುತೂಹಲದಲ್ಲಿ ಕಾದ. ವಾರ ಮುಗಿದರೂ ಮೊಳಕೆ ಕಾಣಲಿಲ್ಲ.. ಹಾಗೆ, ಎರಡುಮೂರು ವಾರಗಳು ಕಳೆದವು. ಕೊನೆಗೆ ತಿಂಗಳಾಯ್ತು, ಅದರ ಕತೆ ಅಷ್ಟೇ, ಮುಗೀತು ಅಂದುಕೊಂಡ.. ಆದರೂ ಯಾವುದೋ ಸಣ್ಣ ಭರವಸೆಯಿಂದ ನೆನಪಾದಾಗೆಲ್ಲಾ ನೀರೆರೆಯುತ್ತಲೇ ಇದ್ದ, ತಿಂಗಳು ಕಳೆದು ವರ್ಷಹೋಯ್ತು.. ಆಗಲೂ ಬಿದಿರುಬೀಜಗಳು ಮೊಳೆಯುವ ಸುಳಿವಿರಲಿಲ್ಲ.. ಬೀಜ ಗೆದ್ದಲಿನ ಆಹಾರವೋ, ಮಣ್ಣೊಳಗೆ ಗೊಬ್ಬರವೋ ಆಗಿರಬಹುದಂತ ಸುಮ್ಮನಾದ.. ಮಾರನೇ ವರ್ಷ ಅಲ್ಲಿ ನಡೆದಾಡುವಾಗೆಲ್ಲ ಬಿತ್ತಿದ್ದ ಬೀಜದ ನೆನಪಾಗುತ್ತಿತ್ತು.. ಬೇಸರವೂ. ಆದರೆ ಅಲ್ಲೇನೂ ಇರಲಿಲ್ಲ. ಹೀಗೆ ಮೂರು, ವರ್ಷಕಳೆದವು. ಕೊನೆಗದು ಅವನಿಗೆ ಮರೆತು ಹೋಯ್ತು. ನಾಲ್ಕನೇ ವರ್ಷಕ್ಕೆ ಕಾಲಿಡುವ ಹೊತ್ತಿಗೆ ಬೇಲಿಯಂಚಿಗೆ ಬಂದ ಗುಂಡನಿಗೊಂದು ಆಶ್ಚರ್ಯ ಕಾದಿತ್ತು. ಬಿದಿರು ಬೀಜಗಳು ಅಣಬೆ ಮೊಗ್ಗುಗಳಂತೆ ರಾಶಿರಾಶಿಯಾಗಿ ಮೊಳಕೆಯೊಡೆಯುತ್ತಿದ್ದವು!. ಮೂರು ವರ್ಷಗಳವರೆಗೆ ಕಾದರೂ ಕಾಣದ ಮೊಳಕೆಗಳು ಕೊನೆಯಲ್ಲಿ ಪುತಪುತನೆ ಹೊರಬರುತ್ತಿದ್ದುದನ್ನು ಸೋಜಿಗವೆಂಬಂತೆ ನೋಡುತ್ತಿದ್ದವನಿಗೆ ಮತ್ತೆಮತ್ತೆ ಬೆರಗು. ಬೀಜ ಮೊಳೆಯಲು ಬರೋಬ್ಬರಿ ನಾಲ್ಕು ವರ್ಷ ತೆಗೆದುಕೊಂಡ ಈ ಹುಲ್ಲು ಜಾತಿಯ ಸಸ್ಯ, ಒಮ್ಮೆ ನೆಲಬಿಟ್ಟು ಮೇಲೇಳುತ್ತಿದ್ದಂತೆ ಗಂಟೆಗೆ ಒಂದೂವರೆ ಇಂಚುಗಳಷ್ಟು ಹಿಗ್ಗುತ್ತಾ, ಮುಗಿಲು ಮುಟ್ಟಲು ಧಾವಿಸುತ್ತಿತ್ತು!. ಬಾಹ್ಯ ಬೆಳವಣಿಗೆಯ ಪೂರ್ವದ ದೀರ್ಘಾವಧಿಯಲ್ಲಿ ಬೀಜಗಳು ಮಣ್ಣೊಳಗೆ ಜಡವಾಗಿ ಬಿದ್ದಿರದೇ ನಿರಂತರ ಕಾರ್ಯಮಘ್ನವಾಗಿದ್ದವು ಎಂಬ ನಿಸರ್ಗದ ನಿಗೂಢತೆಯೊಂದು ಅಮ್ಮನಿಂದ ಅವನಿಗೆ ಮನವರಿಕೆಯಾಯ್ತು..!.

ಸಸ್ಯಪ್ರಪಂಚದಲ್ಲಿ ತೀವ್ರಗತಿಯ ಬೆಳವಣಿಗೆ ಸಾಮರ್ಥ್ಯವುಳ್ಳ ಬಿದಿರು, ಅಷ್ಟೂ ದಿನ ನೆಲದೊಳಗೆ ಮುಂದಿನ ತ್ವರಿತ ಬೆಳವಣಿಗೆಯನ್ನು ಜಾರಿಗೊಳಿಸಲು ಅಗತ್ಯ ನೀಲಿನಕ್ಷೆ ಮತ್ತು ತಯಾರಿಯನ್ನು ಸದ್ದಿಲ್ಲದೆ ನಡೆಸಿತ್ತು!. ಯಾವುದೇ ದೊಡ್ಡ ಯಶಸ್ಸು ಏಕಾಏಕಿ ಘಟಿಸುವುದಿಲ್ಲ. ಅದರ ಹಿಂದೆ ದೀರ್ಘ ಕಾಲದ ಪ್ರಯತ್ನ ಅಡಗಿರುತ್ತದೆ ಎಂಬ ದಿವ್ಯಸತ್ಯವೊಂದು ಗುಂಡನಿಗೆ ಅವತ್ತು ಗೋಚರಿಸಿತ್ತು.

ಹಸಿರ ಚಪ್ಪರ ಹಾಸಿನಂತೆ ಹರಡಿಕೊಳ್ಳುತ್ತಾ ಕಾಡೊಳಗೆ ಮೈಲುಗಟ್ಟಲೆ ವಿಸ್ತರಿಸಿಕೊಳ್ಳುವ ಬಿದಿರುಮೆಳೆಗಳು ಅಸಂಖ್ಯ ಪಶುಪಕ್ಷಿಗಳ ಪಾಲಿನ ಬೆಚ್ಚನೆಯ ಗೂಡು, ಜೀವಪೊರೆಯುವ ಮಮತೆಯ ಮಡಿಲು.. ಕೆಲವೆಡೆ ಬೆಳಕೇ ನೆಲತಾಕದಂತಹ ಮೇಲ್ಹಾವಣಿಯಾಗಿ ಕಂಡರೆ, ಮತ್ತೆ ಕೆಲವೆಡೆ ಗಡಿಬೇಲಿಯ ತಡೆಗೋಡೆಯಂತೆ ಕಿಕ್ಕಿರಿದ ದಟ್ಟಣೆಯಲ್ಲಿ ಹಬ್ಬಿದ ಮುಳ್ಳುಮಟ್ಟಿಗಳಿವೆ..

ಮುಖ್ಯವಾಗಿ ಬಿದಿರು ಆನೆ, ಸಾಂಬ, ಜಿಂಕೆಗಳಿಗೆ ನೆಚ್ಚಿನ ಆಹಾರ. ಆಮ್ಲಜನಕ ಉತ್ಪಾದನೆ ಮತ್ತು ಭೂತಾಪಮಾನವನ್ನು ನಿಯಂತ್ರಿಸುವಲ್ಲಿಯೂ ಅದರದ್ದು ಮಹತ್ವದ ಪಾತ್ರ. ಅಪರಿಮಿತವಾಗಿ ಬೆಳೆದು ಸ್ಥಳೀಯರ ಬೇಡಿಕೆಗಳಿಗೆ ಒಗ್ಗುವುದು ಮತ್ತು ಒದಗುವುದರೊಂದಿಗೆ ಬಹಳಷ್ಟು ಮರಮಟ್ಟುಗಳ ಬಳಕೆಯನ್ನು ಮಿತಿಗೊಳಿಸುವ ಮೂಲಕ ಇತರೆ ಸಸ್ಯಸಂಕುಲದ ವಿನಾಶವನ್ನು ತಡೆಯುತ್ತದೆ. ಸುತ್ತಗಲಕ್ಕೆ ಬಿಚ್ಚಿಕೊಳ್ಳುವ ಬೇರುಗಳು ಮೇಲ್ಮಣ್ಣಿನ ಸವಕಳಿಯನ್ನು ನಿಯಂತ್ರಿಸುವುದಲ್ಲದೆ ಮಣ್ಣಿನ ಸೂಕ್ಷ್ಮಜೀವಿಗಳನ್ನು ಪೊರೆಯುತ್ತಾ ಫಲವತ್ತತೆಗೂ ಅಮೂಲ್ಯ ಕಾಣಿಕೆ ನೀಡುತ್ತದೆ. ನಾವು ಚಿಕ್ಕಂದಿನಲ್ಲಿ ಕೇಳಿದ್ದ 'ಬಿದಿರವ್ವ ತಾಯಿ ಕೇಳೆ.. ನೀನಾರಿಗಲ್ಲದವಳೇ..' ಎಂಬ ಜಾನಪದ ಧಾಟಿಯ ಶಿಶುನಾಳ ಷರಿಪಜ್ಜರ ತತ್ವಪದವನ್ನು ಮರೆಯುವುದು ಹೇಗೆ?. ಬಿದಿರಿನೊಂದಿಗೆ 'ತೊಟ್ಟಿಲಿನಿಂದ ಶುರುವಾಗುವ ಪ್ರಯಾಣ ಚಟ್ಟದೊಂದಿಗೆ ಮುಗಿಯುತ್ತದೆ..!' ಎಂಬಂತಹ ಮನುಷ್ಯನ ಆದಿ-ಅಂತ್ಯವನ್ನು ಬಣ್ಣಿಸುತ್ತಲೇ ವಿವಿಧ ಹಂತಗಳಲ್ಲಿ ನಮ್ಮೊಟ್ಟಿಗೆ ಬದುಕಿನ ಭಾಗವಾಗಿ ಬೆರೆತುಹೋದ ಬಿದಿರೆಂಬ ಜೀವಬಂಧುವನ್ನು ಸ್ವಾರಸ್ಯಕರವಾಗಿ ಸ್ಮರಿಸುತ್ತಾರೆ. ಬಿದಿರು ಕಾಗದ, ರೇಯಾನ್ ಬಟ್ಟೆಗಾಗಿ ಬೃಹತ್ ಕೈಗಾರಿಕೆಗಳಿಗೆ ಕಚ್ಚಾವಸ್ತುವನ್ನು ಪೂರೈಸುವುದಲ್ಲದೆ ಕಲಾಕೃತಿಗಳು, ಸಂಗೀತ ಉಪಕರಣಗಳು, ಅಲಂಕಾರಿಕೆಗಳ ತಯಾರಿಕೆ, ಬೆಂಚಿನಂತಹ ಪೀಠೋಪಕರಣಗಳು, ತಯಾರಿಸುವ ಗುಡಿಕೈಗಾರಿಕೆಗಳಲ್ಲಿಯೂ, ಆಯುರ್ವೇದಿಕ್ ಔಷಧವಾಗಿಯೂ ಚಾಲ್ತಿಯಲ್ಲಿದೆ. ಬಿದಿರಿನ ಚಿಗುರು, ಕಳಲೆಯು ರುಚಿಕರ ಖಾದ್ಯವಾಗಿ, ಉಪ್ಪಿನಕಾಯಿಯಾಗಿಯೂ ಜನಪ್ರಿಯ. ಪಶುಪಕ್ಷಿಗಳಿಗೆ ಬಿದಿರಕ್ಕಿಯು ಕೂಡ ಅಕ್ಕಿ-ಗೋದಿಗಳಿಗಿಂತ ಹೆಚ್ಚು ಪೌಷ್ಟಿಕತ್ವವುಳ್ಳದ್ದು.

ಪುರಾಣ ಕಾಲದಿಂದಿಂದಲೂ ಮನುಕುಲಕ್ಕೆ ಬಗೆಬಗೆಯ ಸಾಧನ-ಸಲಕರಣೆಗಳಾಗಿ ಬಿದಿರು ಸಾಗಿಬಂದಿದೆ.. ಲವಕುಶರ ಬಿಲ್ವಿದ್ಯೆಗೆ ಬೇಕಾಗಿ, ಕೃಷ್ಣನ ಕೊಳಲಿನ ನಿನಾದವಾಗಿ ನಲಿದಾಡಿ ಬೃಂದಾವನಕ್ಕೆಲ್ಲಾ ಕಳೆಕಟ್ಟುತ್ತದೆ..! ಹಳ್ಳಿಗಾಡಲ್ಲಿ ರೈತನ ಬಹುತೇಕ ಸಾಂಪ್ರದಾಯಿಕ ಸಲಕರಣೆಗಳಲ್ಲಿ ತಾನೂ ಒಂದಾಗುವ ಬಿದಿರಿನದ್ದು ಅವನ ದಣಿವರಿಯದ ದುಡಿತಕ್ಕೆ ಆಪ್ತಸಾಂಗತ್ಯ. ಯಂತ್ರನಾಗರೀಕತೆಗಿಂತ ಮುಂಚೆ ಬಿದಿರನ್ನು ಬಿಟ್ಟು ಗ್ರಾಮ್ಯ ಭಾರತವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ ಎಂಬಷ್ಟು ಹಳ್ಳಿ ಬದುಕಲ್ಲಿ ಹಾಸು ಹೊಕ್ಕಾಗಿತ್ತು. ವಿಶೇಷವಾಗಿ ಅರಣ್ಯ ಪ್ರದೇಶದಲ್ಲಿಯ ರೈತಾಪಿ ಬದುಕಿನ ಭಾಗವಾದ ಬಿದಿರು ಭಾರ ಹೊರಲು ಬುಟ್ಟಿಯಾಗಿ, ಕಾಳು ಒಣಗಿಸುವ ತಟ್ಟಿಯಾಗಿ, ಧಾನ್ಯ ಸಂಗ್ರಹಿಸುವ ಗುಡಾಣವಾಗಿ ಶೇಖರಿಸಿ, ಸಂರಕ್ಷಿಸುವ ಕಣಜವಾಗಿ, ಎತ್ತಿನ ಗಾಡಿಯ ತಯಾರಿಕೆಯಲ್ಲಿಯೂ ಉಪಯುಕ್ತವಾಗಿತ್ತು. ಹಳ್ಳಿಯಲ್ಲಿ ತುಡುವಿನ ಜಾನುವಾರಗಳ ಉಪಟಳವನ್ನು ಎಚ್ಚರಿಸಲು ಕುತ್ತಿಗೆಗೆ ಕಟ್ಟುವ ಸದ್ದುಮಾಡುವ ದೊಂಟೆ, ಮುಂಗಾರಿನಲ್ಲಿ ಮೀನು ಹಿಡಿಯುವ ಕುಣಿ, ದರುಗೆಲೆ ತುಂಬುವ ಜಲ್ಲೆ, ಸಸಿನಟ್ಟಿ ಕಾಲಕ್ಕೆ ಗೊರಬು, ಒಕ್ಕಲು ಕಣದಲ್ಲಿ ಎತ್ತುಗಳಿಗೆ ಬಾಯಿಕುಕ್ಕೆ, ಹೆಂಟೆಯೊಡೆಯಲು ನಳ್ಳಿನೊಗ. ಬೀಜ ಬಿತ್ತುವ ಕೂರಿಗೆ, ಒಕ್ಕಲಾಟದಲ್ಲಿ ಹುಲ್ಲು ಕೊಡಹುವ ಕೋಲು, ಎಳೆಯುವ ಕೊಕ್ಕೆ, ಉಣಗೋಲು, ಬೇಲಿಯೊಡ್ಡಿಗೆ ಬೇಕಾಗುವ ಮುಳ್ಳು-ಅಡ್ಡೆ, ಅಡಿಕೆ ಕೊನೆಗಾರನ ದೋಟಿಯಾಗಿಯೂ ಬಿದಿರಿಗೆ ಬಹುಬೇಡಿಕೆ ಇದೆ. ಇನ್ನು ಗೃಹೋಪಯೋಗಿ ಪರಿಕರಗಳಲ್ಲಿಯೂ ಬಿದಿರಿನದ್ದು ಮಹತ್ವಪೂರ್ಣ ಪಾತ್ರಪೋಷಣೆ. ಮನೆ ಮಾಡಿನ ದಬ್ಬೆ-ಗಳ, ಹುಲ್ಲು ಮನೆಯ ದಿಟಿಕೆ ಗೋಡೆ-ಬಾಗಿಲು, ಸೂರಿನ ನೀರಿಗೆ ಒದಿಗೆ, ಅನ್ನ ಬಸಿವ ಸಿಬ್ಬಲ, ಅಕ್ಕಿ ಕೇರುವ ಮೊರ, ಬೆಕ್ಕಿನ ಬಾಯಿಗೆ ಸಿಗದಂತೆ ಹಾಲು ರಕ್ಷಿಸಲು ತೂಗುವ ಸಿಕ್ಕ, ಗಾಳಿ ಬೀಸಲು ಬೀಸಣಿಗೆ, ಮರ ಮತ್ತು ಅಟ್ಟಹತ್ತಲು ಬಳಸುವ ಏಣಿಯಾಗಿ ಮಾತ್ರವಲ್ಲ ತನ್ನ ನದಿಹಳ್ಳಗಳನ್ನು ದಾಟುವ ತೆಪ್ಪ, ದೋಣಿಗಳಾಗಿಯೂ, ಕಾಲುಸೋತ ಮನುಷ್ಯನಿಗೆ ಊರುಗೋಲಿನ ಆಸರೆಯಾಗಿಯೂ ಜತೆಗೂಡಿದೆ. ಸುಮಾರು ಅರವತ್ತರಿಂದ ನೂರು ವರ್ಷ ಬದುಕುವ ಬಹುತೇಕ ಬಿದಿರು ತಳಿಗಳು ಜೀವಿತಾವಧಿಯಲ್ಲಿ ಕೇವಲ ಒಂದು ಬಾರಿ ಅದರಲ್ಲೂ ಜೀವಿತದ ಕಡೆಗಾಲದಲ್ಲಿ ಹೂಬಿಡುತ್ತದೆ.. ಮಲೆನಾಡು ಬಾಗದಲ್ಲಿ ಅದನ್ನು 'ಬಿದಿರು ಕಟ್ಟೆ' ಅಂತ ಕರೆಯುವುದಿದೆ. ಬಿದಿರಿಗೆ ಕಟ್ಟೆ ಬಂತೆಂದರೆ ಅದು ಬರಗಾಲದ ಸಂಕೇತ, ಕಷ್ಟಕಾಲದ ಕಣ್ಸನ್ನೆ ಅಂತ ಹಿರಿಯರು ಭಾವಿಸುತ್ತಾರೆ ಮತ್ತು ಹಿಂದೆ ಆಹಾರದ ಅತೀವ ಕೊರತೆ ಎದುರಾಗಿದ್ದಾಗ ತಾವು ಬಿದಿರಕ್ಕಿ ತಂದು ಉಂಡಿದ್ದನ್ನು ಅವರು ನೆನೆದು ತೇವಗೊಳ್ಳುವುದಿದೆ. ಅಲ್ಲಿ ಹಳ್ಳಿಯ ಅಜ್ಜಿಯೊಬ್ಬರು "ಅಂವ ಎರಡು ಸಾರಿ ಬಿದ್ರಕ್ಕಿ ತಿಂದೋನು.." ಅಂತ ಶ್ರಮಿಕ, ಹಿರಿಜೀವವೊಂದನ್ನು ಬಣ್ಣಿಸಿದ್ದು ನೆನಪಾಗುತ್ತಿದೆ.

ಕಳೆದ ಏಳೆಂಟು ವರ್ಷದ ಅವಧಿಯಲ್ಲಿ ಮಲೆನಾಡಿನಾದ್ಯಂತ

ಸಾಮೂಹಿಕವಾಗಿ ಬಿದಿರಿಗೆ ಕಟ್ಟೆ ಬಂದ ಪರಿಣಾಮ ದಟ್ಟಡವಿಯಲ್ಲಿ ಖಾಲಿಖಾಲಿ ಭಾವ.. ಕಾಡಲ್ಲಿ ಕಣ್ಣು ಸಾಗುವಷ್ಟೂ ದೂರ ಬರೀ ಬಯಲು.. ಬಿಸಿಲಿನ ಬೇಗೆ ಮತ್ತು ನೀರಿನ ತಾತ್ವರವೂ ಕಂಡಿತ್ತು. ಒಣಗಿ ನಿಂತ ಬಿದಿರು ಮಟ್ಟಿಗಳು ಕಾಳ್ಗಿಚ್ಚಿನ ವೇಗ ಹೆಚ್ಚಿಸಿದವು. ರಸ್ತೆ, ವಿದ್ಯುತ್‌ತಂತಿ ಮೇಲೆ ಬಿದ್ದು ಕಿರಿಕಿರಿ ಮಾಡಿದವು. ಕಾಡಂಚಿನ ಜನರ ಸಹಜ ಕೃಷಿಜೀವನಕ್ಕೆ ಗೋಳಾಗಿತ್ತು. ಅವರ ನಿತ್ಯದ ಅಗತ್ಯಗಳಿಗೆ, ಕೃಷಿ ಕಸುಬಿಗೆ ಬಿದಿರಿನ ಅನುಪಸ್ಥಿತಿಯಲ್ಲಿ ಬೆಲೆಬಾಳುವ ಗಿಡಮರಗಳು ಆಹುತಿಯಾದವು. ವಿರಳ ಪೊದೆಗಳ ನಡುವೆ ಕಾಡು ಪ್ರಾಣಿಗಳು ಬದುಕದಾದವು.. ಅದೊಂಥರಾ ಕಾನನದಲ್ಲಿನ ಸ್ಮಶಾನಕಳೆ. ಬಿದಿರು ಅಳಿದ ಮೇಲೆ ವನ್ಯಜೀವಿಗಳಿಗೆ ಆಹಾರದ ಕೊರತೆಯುಂಟಾಗಿ ಅವು ಸಹಜವಾಗಿ ಒತ್ತಿನ ರೈತರ ಗದ್ದೆತೋಟಗಳಿಗೆ ದಾಳಿ ಮಾಡಿದವು.. ಜನ–ವನ್ಯಮೃಗಗಳ ನಡುವಿನ ಸಂಘರ್ಷ ಹೆಚ್ಚಾಯ್ತು.. ಇದೀಗ ಮತ್ತೆ ಬಿದಿರು ಮೊಳೆಯುತ್ತಿದೆ. ಕೆಲವೆಡೆ ಎದೆಮಟ್ಟಕ್ಕೂ ಪೊದೆ ಬೆಳೆದಿದೆ.. ಮತ್ತೆ ಮಲೆನಾಡು ತನ್ನ ಹಸಿರು ವೈಭವಕ್ಕೆ ಮರಳುತ್ತಿದೆ.. ಕಾಡೊಳಗಿನ ಜೀವಕಳೆ ಮರುಸ್ಥಾಪನೆಗೊಳ್ಳುವ ಹಂತದಲ್ಲಿದೆ. ಬಿದಿರು ಅತ್ಯಂತ ವೇಗವಾಗಿ ಬೆಳೆಯುವ ಹುಲ್ಲು ಜಾತಿಯ ಒಂದು ಸಸ್ಯಪ್ರಬೇಧ. ಬಿದಿರು 'ಪೊಯೇಸಿ' ಕುಟುಂಬಕ್ಕೆ ಸೇರಿದ್ದು ದಿನವೊಂದಕ್ಕೆ ಗರಿಷ್ಠ ನಾಲ್ಕು ಅಡಿಗಳಷ್ಟು ಬೆಳೆಯಬಲ್ಲದು. ಆದರೆ ದೀರ್ಘಕಾಲದ ಬ್ರಿಟೀಷ್ ಆಳ್ವಿಕೆಯು ಇದನ್ನೊಂದು ಕಳೆಯೆಂದು ಪರಿಗಣಿಸಿ, ಕಾಡಿನ ಬಿದಿರನ್ನು ನಾಶಗೊಳಿಸಿ ಸಾಗುವಾನಿ, ನೀಲಗಿರಿಯ ನೆಡುತೋಪುಗಳನ್ನು ಉತ್ತೇಜಿಸಿದ್ದು ದೇಶದ ಜೀವವೈವಿಧ್ಯತೆಗೆ ಬಲವಾದ ಪೆಟ್ಟುನೀಡಿತು ಎನ್ನುವವರಿದ್ದಾರೆ.

ಅದೆಲ್ಲದರ ಹೊರತಾಗಿಯೂ ತನ್ನ ಅಪರಿಮಿತ ಗುಣಸಾಮರ್ಥ್ಯದ ಕಾರಣಕ್ಕೆ ಯಥೇಚ್ಛವಾಗಿ ಬಳಸಲ್ಪಡುವ ಬಹುಪಯೋಗಿ ಸಸ್ಯವಾಗಿ ಬಿದಿರು ಉಳಿದಿದೆ. ಹೌದು.. ಹಗುರ, ಸ್ಥಿತಿಸ್ಥಾಪಕ, ತಾಳ್ವಿಕೆ–ಬಾಳಿಕೆ ಮತ್ತು ಬಾಗುವಿಕೆ ಗುಣಗಳುಳ್ಳ ಸಸ್ಯ, ಒಣಬಿದಿರಿನಿಂದ ಅವಾಹಕ, ಹವಾನಿಯಂತ್ರಿತ, ಮಾಲಿನ್ಯ ರಹಿತ, ಪರಿಸರ ಸ್ನೇಹಿ ಸಲಕರಣೆಗಳು ಸಿದ್ಧಗೊಳ್ಳುತ್ತವೆ. ಶೇಖರಣೆ, ಸಾಗಾಣಿಕೆಗೂ ಸುಲಭ. ಎಲ್ಲೆಡೆ ಈಗ, ಮನೆಮನೆಗಳನ್ನು ತುಂಬಿಕೊಂಡಿರುವ ಅನಿವಾರ್ಯ ಕಸಗಳಾದ ಪ್ಲಾಸ್ಟಿಕ್ ಮತ್ತಿತರ ಲೋಹಗಳಿಗೆಸಮರ್ಥ ಪರ್ಯಾಯವಾಗಿಯೂ ಬಿದಿರನ್ನು ಎದುರುಗೊಳ್ಳಬಹುದು. ಬಹುಮುಖ್ಯವಾಗಿ ಆಧುನಿಕ ಕಾಲಘಟ್ಟದ ಆತಂಕಕಾರಿ ಮಾಲಿನ್ಯಕಾರಕವಾಗಿರುವ ಪ್ಲಾಸ್ಟಿಕ್‌ನ ಅತಿಬಳಕೆಯನ್ನು ಮಿತಿಗೊಳಿಸಲು, ಮತ್ತದಕ್ಕೆ ಪ್ರಬಲ ಪ್ರತಿಸ್ಪರ್ಧಿಯಾಗಿಯೂ ಬಿದಿರಿನ ಉತ್ಪನ್ನಗಳನ್ನು ಮುನ್ನೆಲೆಗೆ ತರಬೇಕಾದ ಜರೂರತ್ತಿದೆ. ಸುಸ್ಥಿರ ಕೃಷಿಗೆ ಪೂರಕವಾದ ಬಿದಿರು ಬೆಳೆ ಲಾಭದಾಯಕವೂ ಹೌದು. ಭಾರತದಲ್ಲಿಯೂ ವೈವಿಧ್ಯಮಯ ಬಿದಿರು ತಳಿಗಳಿವೆ. ಮಲೆನಾಡು ಪ್ರದೇಶ ಮಾತ್ರವಲ್ಲದೆ ಬಯಲುನಾಡಿನ ಖಾಲಿಜಾಗ, ಗುಡ್ಡಪ್ರದೇಶಗಳಲ್ಲಿ, ಸವಳು, ಜವುಳು, ಪಾಳು ಭೂಮಿಯಲ್ಲಿಯೂ ಇದನ್ನು ಬೆಳೆಯಬಹುದಾಗಿದೆ. ಬಿದಿರುಬೆಳೆಯನ್ನು ಪ್ರೋತ್ಸಾಹಿಸಲು 'ಭಾರತೀಯ ಬಿದಿರು ಸಮಾಜ'ವು ಸಹಾಯ ಧನವನ್ನೂ ನೀಡುತ್ತಿದೆ. ಹಾಗಾಗಿ ಬೆರಗಿನ ಸಸ್ಯ ಬಿದಿರನ್ನು ಹೆಚ್ಚೆಚ್ಚು ಸಮರ್ಥವಾಗಿ ಬಳಸಿಕೊಳ್ಳಲು, ಬೆಳೆಸಿಕೊಳ್ಳಲು ನಾವೀಗ ಮುಂದಾಗಬೇಕಿದೆ. ■

ಜಾಹೀರಾತು




Visit Agumbe

**Guddekeri Homestay**

**Guddekeri Post,**
**Thirthahalli Taluk,**
**Shimoga Dist.**
**Pin code - 577411**


**Mob: +91 9844737273**
**Website:**
**www.guddekerihomestay.com**
**Like us on Facebook:**
**fb.me/guddekerihomestay**

**Follow us on Instagram:**
**@guddekeri_homestay**





ಶ್ರೀ ದೀಪಕ್ ಶರ್ಮ
ಅಧ್ಯಕ್ಷರು
ಮೊ.9986232094



ಶ್ರೀ ಎನ್.ಸಂಪಂಗಿ
ಸಹ ಅಧ್ಯಕ್ಷರು
ಮೊ.9980294242



ಶ್ರೀ ಆರ್.ಎಮ್. ಪಾಲಣ್ಣ
ಉಪಾಧ್ಯಕ್ಷರು
ಮೊ.9945015617




ಶ್ರೀ ಎ.ಎಂ. ಅಣ್ಣಯ್ಯ
ಕಾರ್ಯದರ್ಶಿ
ಮೊ.9448019306



ಡಾ. ಎಂ.ಮಹದೇವ ಮೂರ್ತಿ
ಸಹ ಕಾರ್ಯದರ್ಶಿ
ಮೊ.9845588203



ಶ್ರೀ ಕೆ.ಎಸ್. ಆನಂದ್
ಖಜಾಂಚಿ
ಮೊ.9448943995



ಶ್ರೀ ಎನ್.ಡಿ. ತಿವಾರಿ
ಸದಸ್ಯರು
ಮೊ.9448360161



ಶ್ರೀ ಬಿ. ಶಿವನಗೌಡ
ಸದಸ್ಯರು
ಮೊ.9448124087



ಶ್ರೀಹೆಚ್.ಜಿ.ಶಿವಾನಂದಮೂರ್ತಿ
ಸದಸ್ಯರು
ಮೊ.9448126246



ಶ್ರೀ ಸಿದ್ದೇಗೌಡ
ಸದಸ್ಯರು
ಮೊ.9449244323




ಶ್ರೀ ಎಸ್. ನಾರಾಯಣಸ್ವಾಮಿ
ಸದಸ್ಯರು
ಮೊ.9880042155



ಶ್ರೀ ಬಿ.ಎಸ್. ರಘುನಾಥ
ಸದಸ್ಯರು
ಮೊ.9945003993





ಶ್ರೀ ಎಂ. ಗುರುಮೂರ್ತಿ
ಸದಸ್ಯರು
ಮೊ.9945754650



ಡಾ|| ಎನ್. ಸ್ವಾಮಿರಾವ್
ಸಹ ಸದಸ್ಯರು
ಮೊ.9880101200



ಶ್ರೀಮತಿ ಶೋಭ ಎಚ್.ಜಿ.
ಸಹ ಸದಸ್ಯರು
ಮೊ.94489 45367




















ವಿಳಾಸ: ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ), ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು –560003

ದೂ: 080 23566126 **Email: iaftbangalore@gmail.com, website: www.iaft.co.in**